ಸಂಪುಟ : 13 Volume | ಸಂಚಿಕೆ : 208 Issue | ಪುಟಗಳು : 08 Pages | ಬುಧುವಾರ 01 ಅಕ್ಟೋಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

ಬೆಳಗು

" ಶಕ್ತಿ ಇರುವುದು ಸಾಧು ಸ್ವಭಾವದಲ್ಲಿ ಹಾಗೂ ಚಾರಿತ್ರ ಶುದ್ಧಿಯಲ್ಲಿ "
ಸ್ವಾಮಿ ವಿವೇಕಾನಂದ

### ಅತಿವೃಷ್ಠಿಯಿಂದ 10 ಲಕ್ಷ ಹೆಕ್ಟೇರಿಗೂ ಹೆಚ್ಚು ಬೆಳೆ ಹಾನಿ

# ಪ್ರತಿ ಹೆಕ್ಟೇರ್‌ಗೆ 8,500 ರೂ. ಹೆಚ್ಚುವರಿ ಪರಿಹಾರ:ಸಿ.ಎಂ

ಕಲಬುರಗಿ,ಸೆ.30:ರಾಜ್ಯದಾದ್ಯಂತ ಪ್ರಸಕ್ತಸಾಲಿನ ಜೂನ್ ಮಾಹೆಯಿಂದ ಇಲ್ಲಿಯ ವರೆಗೆ ಅತಿವೃಷ್ಠಿ ಮತ್ತು ವ್ಯಾಪಕ ಮಳೆಯಿಂದ ಪ್ರಾಥಮಿಕ ವರದಿ ಪ್ರಕಾರ 10 ಲಕ್ಷಕ್ಕೂ ಹೆಚ್ಚಿನ ಹೆಕ್ಟೇರ್ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದ್ದು, ಎನ್.ಡಿ.ಆರ್. ಎಫ್. ಪರಿಹಾರದ ಜೊತೆಗೆ ಪ್ರತಿ ಹೆಕ್ಟೇರ್‌ಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ 8,500 ರೂ. ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಮಂಗಳವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಹೆಚ್ಚುವರಿ ಪರಿಹಾರ ಘೋಷಣೆಯಿಂದಾಗಿ ಮಳೆಯಾಶ್ರಿತ ಪ್ರತಿ ಹೆಕ್ಟೇರ್‌ಗೆ 8,500 + 8,500 ಸೇರಿ 17,000 ರೂ., ನೀರಾವರಿ ಬೆಳೆಗಳಿಗೆ 17,000 + 8,500 ಸೇರಿ 25,500 ರೂ. ಹಾಗೂ ಬಹು ವಾರ್ಷಿಕ ಬೆಳೆಗಳಿಗೆ 22,500 + 8,500 ಸೇರಿ 31,000 ರೂ. ಪರಿಹಾರ ಸಿಗಲಿದೆ ಎಂದರು.

ಸತತ ಮಳೆಯಿಂದ ಇದೂವರೆಗೆ ಶೇ.50ರಷ್ಟು ಪ್ರದೇಶದಲ್ಲಿ ಮಾತ್ರ ಸಮೀಕ್ಷೆ ಕಾರ್ಯ ಮುಗಿದಿದೆ. ಉಳಿದೆಡೆ ಮಳೆ ತಗ್ಗಿದ ಬಳಿಕ ಕೂಡಲೆ ಜಂಟಿ ಸಮೀಕ್ಷೆ ಮಾಡಿ ಪರಿಹಾರ ಹಣವನ್ನು ರೈತರ ಖಾತೆಗೆ ಜಮೆ ಮಾಡುವಂತೆ ಸೂಚನೆ ನೀಡಿದ್ದೇನೆ. ಒಟ್ಟಾರೆ–ಯಾಗಿ ಎನ್.ಡಿ.ಆರ್.ಎಫ್. ಮತ್ತು ಹೆಚ್ಚುವರಿ ಪರಿಹಾರ ಸೇರಿ ರಾಜ್ಯ ಸರ್ಕಾರದಿಂದ 2,000 ಕೋಟಿ ರೂ.ಕ್ಕಿಂತ ಹೆಚ್ಚಿನ ಹಣ ರೈತರಿಗೆ ಪರಿಹಾರ ರೂಪದಲ್ಲಿ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯದಲ್ಲಿ ಜೂನ್ 1 ರಿಂದ ಸೆಪ್ಟೆಂಬರ್ 29ರವರೆಗೆ ಸರಾಸರಿಯಂತೆ 845 ಮಿ.ಮಿ. ಮಳೆಯಾಗಬೇಕಿತ್ತು. ಆದರೆ 879 ಮಿ.ಮಿ ಮಳೆಯಾಗಿದೆ. ವಾಡಿಕೆಗ್ಗಿಂತ ಶೇ.4ರಷ್ಟು ಮಳೆ ಮಾತ್ರ ಹೆಚ್ಚಾಗಿದೆ. ಆದರೆ ಉತ್ತರ ಕರ್ನಾಟಕ ಭಾಗದಲ್ಲಿ ಮಹಾರಾಷ್ಟ್ರದಿಂದ ಹೆಚ್ಚಿನ ನೀರು ಬಿಟ್ಟಿರುವ ಕಾರಣ ಮತ್ತು




ಸತತ ಮಳೆಯಿಂದ ವಿಜಯಪುರ ಜಿಲ್ಲೆಯಲ್ಲಿ–58, ಬಾಗಲಕೋಟೆ–37, ಕಲಬುರಗಿ–34, ಯಾದಗಿರಿ–29, ಬೆಳಗಾವಿ–26, ರಾಯಚೂರು–21, ಗದಗ–17 ಹಾಗೂ ಬೀದರ ಜಿಲ್ಲೆಯಲ್ಲಿ ಶೇ.16ರಷ್ಟು ಹೆಚ್ಚುವರಿ ಮಳೆಯಿಂದಾಗಿ ಪ್ರಾಥಮಿಕ ಅಂದಾಜಿನ ಪ್ರಕಾರ 8,88,953 ಹೆಕ್ಟೇರ್ ಕೃಷಿ ಮತ್ತು 71,624 ತೋಟಗಾರಿಕೆ ಬೆಳೆಗಳು ಹಾನಿಗೊಳಗಾಗಿವೆ. ರಾಜ್ಯದಲ್ಲಿ ಹಾನಿಯಾದ 10 ಲಕ್ಷ ಹೆಕ್ಟೇರ್ ಪ್ರದೇಶಗಳ ಪೈಕಿ ಉತ್ತರ ಕರ್ನಾಟಕದ ಈ ಜಿಲ್ಲೆಗಳಲ್ಲಿಯೇ ಶೇ.90ರಷ್ಟು ಹಾನಿಯಾಗಿದೆ ಎಂದು ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದ ಮಳೆ ಹಾನಿ ಸ್ಥಿತಿ ವಿವರಿಸಿದರು.

ಇಂದಿಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೇರಿದಂತೆ ಪ್ರದೇಶದ ಸಚಿವರೊಂದಿಗೆ ವಿಜಯಪುರ, ಕಲಬುರಗಿ, ಬೀದರ, ಯಾದಗಿರಿ ಜಿಲ್ಲೆಯ ವೈಮಾನಿಕ ಸಮೀಕ್ಷೆ ನಡೆಸಿದ್ದು, ಜಮೀನುಗಳು ಕೆರೆಗಳಾಗಿ ಮಾರ್ಪಟ್ಟಿವೆ. ರಸ್ತೆ ಸಂಪರ್ಕ ಕಡಿತಗೊಂಡಿವೆ, ಸೇತುವೆ ಹಾಳಾಗಿವೆ, ಅನೇಕ ಮೂಲಸೌಕರ್ಯ ಹಾನಿಯಾಗಿದ್ದು ಕಂಡುಬಂದಿದೆ. ರೈತರು ಎರಡೆ–ರೆಡು ಬಾರಿ ಬೆಳೆದರು ಫಲ ಸಿಕ್ಕಿಲ್ಲ. ಹೀಗಾಗಿ ಕೇಂದ್ರ ಸರ್ಕಾರ ಸಹ ಈ ಪ್ರದೇಶಕ್ಕೆ ಹೆಚ್ಚುವರಿಯಾಗಿ ಪರಿಹಾರ ನೀಡಬೇಕು. ಜಂಟಿ ಸಮೀಕ್ಷೆ ಮುಗಿದ ನಂತರ ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗಲಾಗುವುದು ಎಂದು ಸಿ.ಎಂ. ಸಿದ್ದರಾಮಯ್ಯ ತಿಳಿಸಿದರು.

ರಾಜ್ಯದಾದ್ಯಂತ ಇದೂವರೆಗೆ 52 ಜನ ಮಾನವ ಹಾನಿಯಾಗಿದ್ದು, 422 ಜಾನುವಾರುಗಳು ಮಳೆಗೆ ಕೊಚ್ಚಿ ಹೋಗಿವೆ. ಎಲ್ಲದಕ್ಕೂ ಪರಿಹಾರ ನೀಡಲಾಗಿದೆ. 547 ಪೂರ್ಣ ಪ್ರಮಾಣದಲ್ಲಿ ಮನೆ ಹಾನಿಯಾಗಿದ್ದು, ತಲಾ 1.20 ಲಕ್ಷ ರೂ. ಗಳಂತೆ ಮತ್ತು ಭಾಗಶ: ಮನೆ ಹಾನಿಯಾದ 75 ಪ್ರಕರಣಗಳಲ್ಲಿ ತಲಾ 50 ಸಾವಿರ ರೂ. ಗಳಂತೆ ಪರಿಹಾರ ನೀಡಲಾಗಿದೆ. 3,881 ಮನೆಗಳು ಶೇ.15 ರಿಂದ 25ರಷ್ಟು ಹಾನಿಗೊಳಗಾಗಿದ್ದು, ಮನೆಮಾಲೀಕರಿಗೆ 6,500 ರೂ. ಗಳಂತೆ ಪರಿಹಾರ ನೀಡಲಾಗಿದೆ. ಮನೆಗೆ ನೀರು ನುಗ್ಗಿ ಆಹಾರ ಧಾನ್ಯ, ಗೃಹಪಯೋಗಿ ವಸ್ತುಗಳ ಹಾನಿಗೆ ಇದುವರೆಗೆ 2.50 ಕೋಟಿ ರೂ. ಪರಿಹಾರ ನೀಡಲಾಗಿದೆ. ಜಂಟಿ ಸಮೀಕ್ಷೆ ನಡೆಯುತ್ತಿದ್ದು, ಪರಿಹಾರ ವಿತರಣೆ ಕಾರ್ಯ ನಿರಂತರವಾಗಿರಲಿದೆ ಎಂದರು.

**117 ಗ್ರಾಮಕ್ಕೆ ತೊಂದರೆ, 80 ಕಾಳಜಿ ಕೇಂದ್ರ ಸ್ಥಾಪನೆ:**

ತೀವ್ರ ಅತಿವೃಷ್ಟಿಗೆ ಒಳಗಾದ ಕಲಬುರಗಿ, ವಿಜಯಪುರ, ಯಾದಗಿರಿ ಜಿಲ್ಲೆಯಲ್ಲಿ ಭೀಮಾ ನದಿ ಪ್ರವಾಹದಿಂದ 117 ಗ್ರಾಮಗಳು ತೊಂದರೆಗೀಡಾಗಿದ್ದು, ಕಲಬುರಗಿ–56, ವಿಜಯಪುರ–17 ಹಾಗೂ ಯಾದಗಿರಿಯಲ್ಲಿ 7 ಸೇರಿದಂತೆ ಒಟ್ಟಾರೆ 80 ಕಾಳಜಿ ಕೇಂದ್ರ ತೆರೆದು 10,576 ಜನ ಸಂತ್ರಸ್ತರಿಗೆ ಊಟೋಪಚಾರದ ಜೊತೆಗೆ ಅಗತ್ಯ ಮೂಲಸೌಕರ್ಯ ಒದಗಿಸಲಾಗಿದೆ ಎಂದು ಸಿ.ಎಂ. ಸಿದ್ದರಾಮಯ್ಯ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು

3ನೇ ಪುಟನೋಡಿ

## ವೈಮಾನಿಕ ಸಮೀಕ್ಷೆ ನಡೆಸಿದ ಮುಖ್ಯಮಂತ್ರಿಗಳು ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರು



ಬೀದರ, ಸೆ.30: ಬೀದರ ಜಿಲ್ಲೆಯಲ್ಲಿ ಸುರಿದ ಅತಿವೃಷ್ಟಿ ಹಾಗೂ ಮಾಂಜ್ರಾ ಮತ್ತು ಕಾರಂಜಾ ನದಿಗಳ ಪ್ರವಾಹದಿಂದ ತತ್ತರಿಸಿದ ಪ್ರದೇಶಗಳ ಕುರಿತು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ವೈಮಾನಿಕ ಸಮೀಕ್ಷೆ ನಡೆಸಿ, ಜಿಲ್ಲೆಯಲ್ಲಿ ಕೃಷಿಭೂಮಿ, ಮನೆಗಳು ಸೇರಿದಂತೆ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಉಂಟಾದ ಭಾರೀ ಹಾನಿ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿದರು.

## ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ

ಮಲ್ಲಮ್ಮ ನುಡಿವಾರ್ತೆ

ಕುಕನೂರ: ಸೆ.30:ತಾಲೂಕಿನ ತಳಕಲ ಗ್ರಾಮದಲ್ಲಿ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯ ರಾಯಚೂರು –ಬೀಜ ಘಟಕ ರಾಯಚೂರು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಇಲಾಖೆ ಕೊಪ್ಪಳ ಇವರ ಸಹಯೋಗದಲ್ಲಿ "ಹಿಂಗಾರು ಬೀಜ ದಿನೋತ್ಸವ ಮತ್ತು ಬೀಜ ಗ್ರಾಮ ಯೋಜನೆ ಅಡಿಯಲ್ಲಿ ಕಡಲೆ ಬೀಜ (ಬಿಜಿಡಿ111–1) ವಿತರಣಾ ಕಾರ್ಯಕ್ರಮ" ಹಮ್ಮಿಕೊಳ್ಳಲಾಗಿತ್ತು. ಈ ಕುರಿತು ಮಾತನಾಡಿದ ಶಾಸಕ ಬಸವರಾಜ ರಾಯರೆಡ್ಡಿ ಅವರು, 'ರಾಜ್ಯದ ಮುಖ್ಯಮಂತ್ರಿಗಳು ಬಹಳ ವಿಶೇಷವಾಗಿ ನಮ್ಮ ಭಾಗಕ್ಕೆ ಮಳೆ



ಆಧಾರಿತ ಕೃಷಿ ಪದ್ಧತಿ ಇರುವುದರಿಂದ, ರೈತರ ಹೊಲಗಳಲ್ಲಿ ಕೃಷಿ ಹೊಂಡ ನಿರ್ಮಾಣಕ್ಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಹಾಗೆ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದಿಂದ ನುರಿತ ಪರಿಣಿತ ವಿಜ್ಞಾನಿಗಳು ಈ ಕಾರ್ಯಕ್ರಮದ ಮೂಲ ಆಸೆಗಳನ್ನು ಮತ್ತು ರೈತರಿಗೆ ಬೀಜ ಸಂಸ್ಕರಣೆ ಹಾಗೂ ಬೀಜ ಉತ್ಪಾದನೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಿದ್ದಾರೆ ಎಂದು ಹೇಳಿದರು. ಈ ಕಾರ್ಯಕ್ರಮವನ್ನು ಕುರಿತು ಮಾತನಾಡಿದ ವಿಜ್ಞಾನಿ ಅಮರೇಶ್ ಗೌಡ, 'ಮೂಲ ಬೀಜ ಉತ್ಪಾದನೆಯ ಈ ಕಡೆ ಬೀಜಗಳನ್ನ 4 ಬಾರಿ ಬಿತ್ತನೆ ಮಾಡಬಹುದಾಗಿದೆ. ಸಂಸ್ಕರಣೆಗೊಂಡ ಮೂಲ ಕಡಲೆ ಬೀಜಗಳು, ಒಂದು ಎಕರೆ ಕಡಲೆ ಬೀಜಗಳನ್ನ ಬಿತ್ತನೆ ಮಾಡಿದರೆ 8 ರಿಂದ 10 ಕ್ವಿಂಟಲ್ ಬೆಳೆ ಇಳುವರಿ ಆಗುವ ಎಲ್ಲಾ ಸಾಧ್ಯತೆಗಳು ಇವೆ.

## ಔಷಧಿ ಸೇವನೆಯಷ್ಟೇ ಫಾರ್ಮಸಿಸ್ಟ ಕರ್ತವ್ಯ ಅವಶ್ಯ: ಡಿಎಚ್‌ಓ ಡಾ ಸುರೇಂದ್ರ ಬಾಬು

ರಾಯಚೂರು ಸೆ 30 : ಆರೋಗ್ಯವನ್ನು ಯೋಚಿಸಿದಷ್ಟೆ, ಫಾರ್ಮಸಿಸ್ಟರ ಬಗ್ಗೆಯು ಯೋಚಿಸಿ ಎಂಬ ಧ್ಯೆಯ ವಾಕ್ಯದೊಂದಿಗೆ ಜಾಗತಿಕವಾಗಿ ಔಷಧಿಯ ಮಾಹಿತಿ, ಸರಿಯಾದ ಸೇವನೆ, ಬಳಕೆಯ ಅವಶ್ಯಕತೆ ಕುರಿತು ಸಾರ್ವಜನಿಕರಿಗೆ ಸೂಕ್ತ ಮಾಹಿತಿ ನೀಡುವ ಬಗ್ಗೆ ನಾವೆಲ್ಲರೂ ಜಾಗೃತಿ ನೀಡಬೇಕಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರ ಬಾಬು ತಿಳಿಸಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಹಾಯಕ



ಔಷದಿ ನಿಯಂತ್ರಕರ ಕಚೇರಿ ಸಹಯೋಗದಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಲ್ಲಿ ಸೆ.30ರಂದು ನಡೆದ ವಿಶ್ವ ಫಾರ್ಮಸಿಸ್ಟ್ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವೈದ್ಯರು ಚಿಕಿತ್ಸೆ ನೀಡಿದರೆ, ಔಷಧಿ ಚೀಟಿಯನ್ವಯ ಔಷಧಿ ವಿತರಿಸುವ ಮತ್ತು ಇತ್ತೀಚಿನ ಇ–ಔಷಧಿ ತಂತ್ರಾಂಶದಲ್ಲಿ ಆಯಾ ಆರೋಗ್ಯ ಕೇಂದ್ರಗಳಲ್ಲಿ ಹೆಚ್ಚು ಬಳಕೆ–ಯ ಔಷಧಿಗಳ ಮಾಹಿತಿ ನೀಡುವ, ಎಕ್ಸ್‌ಪೈರಿ ದಿನಾಂಕ ಪರಿಶೀಲಿಸುವ, ತುರ್ತು ಔಷಧಿಗಳ ದಾಸ್ತಾನು ಇಟ್ಟುಕೊಳ್ಳುವ ಫಾರ್ಮಸಿಸ್ಟ್ ಜವಾಬ್ದಾರಿ ಮಹತ್ವದ್ದಾಗಿದೆ. ಖಾಸಗಿ ಔಷಧಿ ವ್ಯಾಪಾರಸ್ಥರು ತಮ್ಮ ಬಳಿ ಯಾವುದೇ ವೈದ್ಯರ ಚೀಟಿಯಿಲ್ಲದೆ ಬರುವ ಜನತೆಗೆ ಔಷಧಿಗಳ ಅಡ್ಡ ಪರಿಣಾಮ ಹಾಗೂ ವೈದ್ಯಕೀಯ ಪದವಿ ಪಡೆಯದೆ ವೈದ್ಯ ವೃತ್ತಿ ಮಾಡುವ ನಕಲಿ ವೈದ್ಯರಿಗೆ ಔಷಧಿಗಳ ಮಾರಾಟ ಮಾಡದಂತೆ ಕೈಜೋಡಿಸಲು ತಿಳಿಸಿದರು.

## ಸ್ವಚ್ಛ ಸಮಾಜ ನಿರ್ಮಾಣವೇ ನಮ್ಮೆಲ್ಲರ ಗುರಿ: ಬಿರಾದರ




ಬೀದರ, ಸೆ.30: ಪರಿಶುದ್ಧ ಪರಿಸರ ಸ್ವಚ್ಛತೆಯೇ ಆರೋಗ್ಯಕರ ಸಮಾಜದ ಗುಟ್ಟು ಸ್ವಚ್ಛತೆಯಲ್ಲಿಯೇ ದೇವರಿದ್ದಾರೆ ಎಂದು ಬೀದರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ.ಎಸ್.ಬಿರಾದರ ನುಡಿದರು.

ಅವರು ಇಂದು ಬೀದರ ವಿಶ್ವವಿದ್ಯಾಲಯದ ಆವರಣದಲ್ಲಿ ರಾಷ್ಟ್ರಪೀತ ಮಹಾತ್ಮ ಗಾಂಧೀಜಿಯವರ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡಿದ್ದ "ಸ್ವಚ್ಛತಾ ಹೀ ಸೇವಾ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾನಾಡಿದರು. ಇಂದಿನ ಆಧುನಿಕ ಯುಗದಲ್ಲಿ ಅತಿಯಾದ ಪ್ಲಾಸ್ಟಿಕ, ಪೈಬರ್ ಅಲಂಕಾರಿಕ ವಸ್ತುಗಳಿಂದ ಅನಾವಶ್ಯಕ ತ್ಯಾಜ್ಯದಿಂದ ಪರಿಸರ ಹಾಳಾಗುತ್ತಿದೆ. ಪರಿಸರದ ಮೇಲೆ ಆಗುತ್ತಿರುವ ಮಾಲಿನ್ಯದಿಂದ ಪ್ರಕೃತಿ ವಿಷಮಯವಾಗುತ್ತಿದೆ. ಆದ್ದರಿಂದ ಪ್ರಕೃತಿ ಜನಸಂಖ್ಯೆಯುಳ್ಳ ಭಾರತಕ್ಕೆ ಸ್ವಚ್ಛತೆಯ ಅವಶ್ಯಕತೆಯಿದೆ ಎಂದರು. ಬೀದರ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಪರಮೇಶ್ವರ ನಾಯ್ಕ ಟಿ. ಮಾತನಾಡಿ, ಈ ಪರಿಸರವೇ ನಮಗೆ ತಾಯಿ ಪರಿಸರವನ್ನು ಚೆನ್ನಾಗಿ ಇಟ್ಟುಕೊಂಡರೆ ಮಾತ್ರ ಎಲ್ಲರಿಗೂ ಉಳಿಗಾಲವಿದೆ.

# ಕೃಷಿ ಸಚಿವರಿಂದ ಬೆಳೆ ಹಾನಿ ಪರಿಶೀಲನೆ

ಕಲಬುರಗಿ,ಸೆ.30:ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಅವರು ಮಂಗಳವಾರ ಕಲಬುರಗಿ ತಾಲೂಕಿನ ಸಾವಳಗಿ ಕ್ರಾಸ್ ಹಾಗೂ ಆಳಂದ ತಾಲೂಕಿನ ಕಡಗಂಚಿ ಬಳಿ ಇತ್ತೀಚಿನ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ಬೆಳೆ ಹಾನಿ ಪ್ರದೇಶ ವೀಕ್ಷಿಸಿದರು.

ಸಾವಳಗಿ ಕ್ರಾಸ್ ಬಳಿ ಸರ್ವೇ ನಂ.92/1 ರಲ್ಲಿನ ನಾಲ್ಕು ಎಕರೆಯಲ್ಲಿ ಸೋಮಶೇಖರ ಹಣಮಂತರಾವ ಅವರು ಬೆಳೆದ ತೊಗರಿ ಬೆಳೆ ಹಾನಿ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಎನ್. ಚೆಲುವರಾಯಸ್ವಾಮಿ ಅವರು, ಕಳೆದ ಬಾರಿ ಸಹ ಕಲಬುರಗಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಬೆಳೆ ಹಾನಿಯಾದ ಕಾರಣಕ್ಕೆ ಸುಮಾರು 650 ಕೋಟಿ ರೂ. ಪರಿಹಾರ ಘೋಷಿಸಲಾಗಿತ್ತು. ಈ ವರ್ಷ ಸಹ ಮತ್ತೆ ಮಳೆಯಿಂದ ಬೆಳೆ ಹಾನಿಯಾಗಿದ್ದು, ಬೆಳೆ ವಿಮೆ ಪರಿಹಾರದ ಜೊತೆಗೆ ಸರ್ಕಾರದಿಂದ ಪರಿಹಾರ ಬಿಡುಗಡೆ ಕುರಿತು ಸಿ.ಎಂ. ಘೋಷಣೆ ಮಾಡಲಿದ್ದಾರೆ ಎಂದರು.

ಕಲಬುರಗಿ ಸೇರಿದಂತೆ ಯಾದಗಿರಿ, ಬೀದರ, ವಿಜಯಪುರ ಜಿಲ್ಲೆಯಲ್ಲಿನ ಹೆಚ್ಚು ಬೆಳೆ ಹಾನಿಯಾಗಿದೆ. ಇದಲ್ಲದೆ ಬಾಗಲಕೋಟೆ, ದಾರವಾಡ, ಗದಗ ಜಿಲ್ಲೆಯಲ್ಲೂ ಸಹ ಬೆಳೆ ಹಾನಿಯಾಗಿದ್ದು, ಮುಖ್ಯಮಂತ್ರಿ ಇಂದು ವೈಮಾನಿಕ ಸಮೀಕ್ಷೆ ನಡೆಸುತ್ತಿದ್ದಾರೆ. ಬಳಿಕ ತೀವ್ರ ಹಾನಿಗೊಳಗಾದ ನಾಲ್ಕು ಜಿಲ್ಲೆಗಳ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಬೆಳೆ ಹಾನಿ ಕುರಿತು ಸಭೆ ನಡೆಸಿ ಸೂಕ್ತ ಘೋಷಣೆ ಜೊತೆಗೆ ಎನ್.ಡಿ.ಆರ್. ಎಫ್ ನಲ್ಲಿಯೂ ಪರಿಹಾರಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಾಗುತ್ತದೆ ಎಂದು ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಸಿದ್ರಾಮಪ್ಪ ಧಂಗಾಪೂರ ಅವರು ರೈತರ ವಿವಿಧ ಬೇಡಿಕೆಯ ಕುರಿತು ಸಚಿವರಿಗೆ ಮನವಿ ಪತ್ರ ಸಲ್ಲಿಸಿ ಸರ್ಕಾರ ಈಗಾಗಲೆ ಪಂಚ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದು, ರೈತರ ಕಲ್ಯಾಣಕ್ಕಾಗಿ ಬೆಳೆ ಸಾಲ ಮನ್ನಾ ಮಾಡುವ ಆರನೇ ಗ್ಯಾರಂಟಿ ಘೋಷಿಸಬೇಕು ಎಂದು ಮನವಿ ಮಾಡಿದರು.

ಬಳಿಕ ಸಚಿವರು ಕಡಗಂಚಿಯಲ್ಲಿ ಸರ್ವೆ ನಂ.135/2 ರಲ್ಲಿ ರೈತ ಶಿವರಾಜ ಕುಡಕಿ ನಾಲ್ಕು ಎಕರೆಯಲ್ಲಿ ಬೆಳೆದ ತೆ–ೂಗರಿ ಬೆಳೆ ಸಂಪೂರ್ಣ ಹಾನಿಯಸಗಿ ಹೊಲದಲ್ಲಿ ನೀರು ನಿಂತಿರುವುದನ್ನು ವೀಕ್ಷಿಸಿದರು.

**ಸರಡಗಿ ಬಿ.ಯಲ್ಲಿಯೂ ವೀಕ್ಷಣೆ:** ಸರಡಗಿ ಬ್ಯಾರೇಜ್ ಹಿನ್ನೀರಿನಿಂದ ತೀವ್ರ ಹೊಡೆತಕ್ಕೆ ಒಳಗಾದ ಸರಡಗಿ ಬಿ. ಗ್ರಾಮದ ಸರ್ವೆ ನಂ.139/7 ಮತ್ತು 139/9 ರಲ್ಲಿ ಪ್ರಜ್ವಲ ರವೀಂದ್ರ ಅವರ 3.26 ಎಕರೆ, ಸರ್ವೆ ನಂ.139/6 ರಲ್ಲಿ ಅಬ್ಬಾಸಲಿ ಲಾಲ್ ಅಹ್ಮದ ಅವರು



ನಾಲ್ಕು ಎಕರೆ ಹಾಗೂ ಸರ್ವೆ ನಂ. 139/5 ರಲ್ಲಿ ಯೂನುಸ್ ಹಸನ್ ಸಾಬ್ ಅವರು 2 ಎಕರೆಯಲ್ಲಿ ಬೆಳೆದ ತೊಗರಿ, ಸರ್ವೆ ನಂ.140/5 ಮತ್ತು 140/2 ರಲ್ಲಿ ರೈತ ಮಹಿಳೆ ಮಹಾದೇವಿ ಸಾಯಬಣ್ಣ ಅವರಿಗೆ ಸೇರಿದ 3.37 ಎಕರೆಯಲ್ಲಿ ಬೆಳೆದ ಹತ್ತಿ ಬೆಳೆ ಹಾನಿಯನ್ನು ಸಚಿವ ಎನ್. ಚೆಲುವರಾಯಸ್ವಾಮಿ ಅವರು ವೀಕ್ಷಿಸಿದರು. ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ಕೃಷಿ ಉಪನಿರ್ದೇಶಕ ಸೋಮಶೇಖರ ಬಿರಾದರ, ಆಳಂದ ತಹಶೀಲ್ದಾರ ಅಣ್ಣಾರಾಯ ಪಾಟೀಲ, ಕೃಷಿ ಸಹಾಯಕ ನಿರ್ದೇಶಕ ಡಾ.ಅರುಣ ಮೂಲಿಮನಿ ಮೊದಲಾದವರು ಇದ್ದರು.

**ಮಹಿಳಾ ಕ್ರಿಕೇಟ್ ಐಸಿಸಿ ಕಪ್ ಆರಂಭ:ಭಾರತ ತಂಡ ಶ್ರೀಲಂಕಾ ವಿರುದ್ದ 269/8 ರನ್ ಗಳಿಸಿದೆ.**

# ಔರಾದಗೆ ವಿಶೇಷ ಪ್ಯಾಕೇಜ್ ನೀಡಿ : ಶಿಂಧೆ



ಔರಾದ್ :ಸೆ.30: ಮಳೆಯಿಂದ ಹಾನಿಯಾದ ರಸ್ತೆ, ಸೇತುವೆ, ಬ್ರಿಜ್ ಕಂ ಬ್ಯಾರೇಜ್, ಶಾಲೆ, ಅಂಗನವಾಡಿ, ರೈತರ ಬೆಳೆ ಪರಿಹಾರ, ಸರಕಾರಿ ಕಚೇರಿಗೆ ದುರಸ್ತಿ ಮತ್ತು ಸುಧಾರಣೆಗೆ 300 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ನಿವೃತ್ತ ಸಿಎಂ ಅಪರ ಕಾರ್ಯದರ್ಶಿ ಅಭ್ಯರ್ಥಿ ಡಾ. ಭೀಮಸೇನರಾವ ಶಿಂಧೆ ಮನವಿ ಮಡಿದ್ದಾರೆ. ಈ ಕುರಿತು ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿಪತ್ರ ಸಲ್ಲಿಸಿದ್ದಾರೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವೈಮಾನಿಕ ಸಮೀಕ್ಷೆಯನ್ನು ನಡೆಸಿರುವದು ಹರ್ಷ ವ್ಯಕ್ತಪಡಿಸಿದ್ದಾರೆ. ಔರಾದ್ ಮತ್ತು ಕಮಲನಗರ ತಾಲೂಕಿನಲ್ಲಿ ಅತಿವೃಷ್ಟಿಯಿಂದ ರಸ್ತೆ, ಚರಂಡಿ ಹಾಗೂ ಸೇತುವೆ ಅಪಾರ ಪ್ರಮಾಣ ಹಾನಿಯಾಗಿದೆ. ಅದರ ದುರಸ್ಥಿಗೆ 300 ಕೋಟಿ ರೂ. ಅನುದಾನ ನೀಡುವಂತೆ ಒತ್ತಾಯಿಸಿದ್ದಾರೆ.

ರಸ್ತೆ, ಚರಂಡಿ ಹಾಗೂ ಸೇತುವೆಗಳ ಹಾಳಾಗಿದ್ದು, ಸಂಚಾರ ಸ್ಥಗಿತಗೊಂಡಿವೆ. ಆದ್ದರಿಂದ ಕೂಡಲೇ ದುರಸ್ಥಿ ಕಾಮಗಾರಿಗೆ ಮುಖ್ಯಮಂತ್ರಿ ಅವರ ವಿಶೇಷ ನಿಧಿಯಿಂದ 300 ಕೋಟಿ ರೂ. ಅನುದಾನ ಬಿಡುಗಡೆ ಮಾಡುವ ಮೂಲಕ ತ್ವರಿತ ಕಾಮಗಾರಿಗೆ ಮನವಿ ಮಾಡಿದರು.

ಮಳೆಯಿಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಪ್ರಮುಖ ರಸ್ತೆ, ಚರಂಡಿ ಗಳು ಹಾಗೂ ಸೇತುವೆಗಳು ಮುರಿದು ಹೋಗಿವೆ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಔರಾದ್, ಕಮಲನಗರ ತಾಲೂಕು ವ್ಯಾಪ್ತಿಯಲ್ಲಿ ಹಾಳಾಗಿರುವ ರಸ್ತೆ, ಚರಂಡಿ ಮತ್ತು ಸೇತುವೆಗಳ ದುರಸ್ತಿ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಔರಾದ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅತಿವೃಷ್ಟಿಯಿಂದ ರೈತರು ಬೆಳೆದ ಬೆಳೆಗಳು ಕೊಚ್ಚಿಕೊಂಡು ಹೋಗಿವೆ. ಕೆರೆಗಳು ಒಡೆದು ಜಮೀನಿಗೆ ನೀರು ನುಗ್ಗಿವೆ. ಇದರಿಂದ ಅಪಾರ ಪ್ರಮಾಣದ ಹಾನಿಯಾಗಿದೆ. ಕೂಡಲೇ ಕೃಷಿ ಇಲಾಖೆಯಿಂದ ರೈತರಿಗೆ ಪರಿಹಾರ ನೀಡುವಂತೆ ಈಗಾಗಲೇ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಅವರಿಗೆ ಮನವಿಪತ್ರ ಸಲ್ಲಿಸಿದ್ದೇನೆ. ಕೃಷಿ ಬೆಳೆಗಳಾದ ತೊಗರಿ, ಉದ್ದು, ಹತ್ತಿ, ಸೋಯಾಬೀನ್ ಹಾಗೂ ಹೆಸರು ಬೆಳೆಗಳು ಸಂಪೂರ್ಣ ಹಾನಿಗೊಳಗಾಗಿವೆ. ಇದರಿಂದಾಗಿ ರೈತರು ಭಾರಿ ನಷ್ಟ ಅನುಭವಿಸಿದ್ದು, ಸಾವಿರಾರು ರೈತರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ರೈತರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಹಾನಿಗೊಳಗಾದ ಬೆಳೆಗಳಿಗೆ ಗರಿಷ್ಠ ಮೊತ್ತದ ಪರಿಹಾರ ಧನವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು. ರೈತರು ಊಟಕ್ಕೂ ಪರದಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ಕುಡಲೇ ಸರಕಾರ ಸ್ಪಂದಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದ ಮನವಿಪತ್ರದಲ್ಲಿ ಡಾ. ಶಿಂಧೆ ಮನವಿ ಮಾಡಿದ್ದಾರೆ.

# ರಾಮತೀರ್ಥವಾಡಿಯಲ್ಲಿ ಆರ್‌ಟಿಒ ಕಚೇರಿ ಕಾರ್ಯಾರಂಭ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.30: ಸುಸಜ್ಜಿತವಾಗಿ ನಿರ್ಮಾಣಗೊಂಡಿರುವ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿ ಕಟ್ಟಡದಲ್ಲಿ ಕಾರ್ಯಕ್ಕೆ ಬರುವ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಬೇಕು ಎಂದು ಸಂಸದ ಸಾಗರ ಖಂಡ್ರೆ ಹೇಳಿದರು.

ಪಟ್ಟಣದ ಹೊರವಲಯದ ರಾಮತೀರ್ಥವಾಡಿ ಸಮೀಪದ ನೂತನ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿ ಕಟ್ಟಡದಲ್ಲಿ ಮಂಗಳವಾರ ಆಯೋಜಿಸಿದ್ದ ಕಚೇರಿ ಕಾರ್ಯಾರಂಭ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಾಕಷ್ಟು ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ಅದರಲ್ಲಿ ಸೂಕ್ತ ಚಾಲನಾ ತರಬೇತಿ ಪಡೆಯದಿರುವುದು ಕೂಡ ಒಂದು ಕಾರಣ.

ತರಬೇತಿ ಇಲ್ಲದವರಿಗೂ ಚಾಲನಾ ಪರವಾನಿಗೆ ಪತ್ರ ನೀಡಲಾಗುತ್ತಿದೆ. ಇದರಿಂದ ಅವಘಡ ಹೆಚ್ಚಾಗುತ್ತಿವೆ. ಹಾಗಾಗಿ ಸಾರಿಗೆ ಅಧಿಕಾರಿಗಳು ಸೂಕ್ತವಾಗಿ ಪರಿಶೀಲಿಸಿ ಚಾಲನಾ ಪರವಾನಿಗೆ ನೀಡಬೇಕು ಎಂದು ಕಿವಿಮಾತು ಹೇಳಿದರು.

1993ರಲ್ಲಿ ನಮ್ಮ ತಾತ ಭೀಮಣ್ಣ ಖಂಡ್ರೆ ಅವರು ಸಾರಿಗೆ ಸಚಿವರಿದ್ದ ಸಂದರ್ಭದಲ್ಲಿ ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಇಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿ ಆರಂಭಿಸಿದ್ದರು.

ನಮ್ಮ ತಂದೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಈ ಕಚೇರಿಗೆ ಸುಮಾರು 10 ಕೋಟಿ ರೂ ಅನುದಾನ ಒದಗಿಸಿ ಸುಸಜ್ಜಿತ ಕಟ್ಟಡ ನಿರ್ಮಿಸಿ ಕೊಟ್ಟಿದ್ದಾರೆ. ಈ ಕಟ್ಟಡದ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.




**ಅನ್ಯ ವಾಹನಗಳಿಗೆ ಸ್ಥಳೀಯ ನೋಂದಣಿ ಮಾಡಿಸಿ**

ತಾಲೂಕು ಸೇರಿ ಜಿಲ್ಲೆಯಲ್ಲಿ ಓಡಾಟ ನಡೆಸುವ ಅನ್ಯ ರಾಜ್ಯಗಳ ವಾಹನಗಳ ಪರವಾನಿಗೆಯನ್ನು ರದ್ದು ಪಡಿಸಿ ಸ್ಥಳೀಯ ನೋಂದಣಿ ಮಾಡಿಸಿ ಪರವಾನಿಗೆ ಪಡೆದು ಕೊಳ್ಳಬೇಕು ಎಂದು ಜಂಟಿ ಸಾರಿಗೆ ಆಯುಕ್ತ ಸಿದ್ದಪ್ಪ ಕಲೇರ ಹೇಳಿದರು.

ಗಡಿಭಾಗದಲ್ಲಿ ತೆಲಂಗಾಣ, ಆಂಧ್ರಪ್ರದೇಶ ಮತ್ತು ಪಾಂಡಿಚೇರಿ ಪರವಾನಿಗೆ ವಾಹನಗಳ ಓಡಾಟ ಹೆಚ್ಚಿದೆ ಇದರಿಂದ ರಾಜ್ಯದ ಆದಾಯ ಕಡಿಮೆ ಆಗುತ್ತಿದೆ.

ಹಾಗಾಗಿ ಇನ್ನಾದರೂ ಎಲ್ಲ ಅನ್ಯ ರಾಜ್ಯಗಳ ವಾಹನಗಳನ್ನು ಸ್ಥಳೀಯ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಶಶಿಕಲಾ ಅಶೋಕ, ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ದಾಡಗಿ ಗ್ರಾಪಂ ಅಧ್ಯಕ್ಷ ಪ್ರಶಾಂತ ಮಾಳಗೆ, ಕಲಬುರಗಿ ಕೆಕೆಆರ್‌ಟಿಸಿ ಎಇಇ ಶಾಹಿನ್, ನಿವೃತ್ತ ಆರ್‌ಟಿಒ ಕೆ.ಟಿ.ವಿಶ್ವನಾಥ, ಬೀದರ್ ಆರ್‌ಟಿಒ ಜಿ.ಎಂ.ಬಿರಾದಾರ್, ಪ್ರಥಮ ದರ್ಜೆ ಗುತ್ತಿಗೆದಾರ ಬಸವರಾಜ ಸಿಂಗಾಡೆ ಸೇರಿದಂತೆ ಹಲವರು ಇದ್ದರು.


**ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಹ್ಮದ ಜಾಫರ್ ಸಾದೀಕ್ ಸ್ವಾಗತಿಸಿದರು. ಬಿ.ಮಹಾದೇವ ನಿರೂಪಿಸಿ, ವಂದಿಸಿದರು.**

ವಾಹನ ಚಾಲನಾ ಪರೀಕ್ಷಾ ಪಥದಲ್ಲಿ ಅತ್ಯುಧಾನಿಕ ತಂತ್ರಜ್ಞಾನ ಅಳವಡಿಸಿ ಆ ಮೂಲಕ ಅಭ್ಯರ್ಥಿಗಳನ್ನು ಪರೀಕ್ಷೆಗೆ ಒಳಪಡಿಸಿ ಅರ್ಹರಿಗೆ ವಾಹನ ಚಾಲನಾ ಪರವಾನಿಗೆ ಪತ್ರ ನೀಡಬೇಕು.

**– ಸಾಗರ ಖಂಡ್ರೆ ಸಂಸದರು ಬೀದರ್**

# ನಾಳೆ ಕಲ್ಯಾಣ ಕ್ರಾಂತಿ ವಿಜಯೋತ್ಸವ

ಮಲ್ಲಮ್ಮ ನುಡಿ ವಾರ್ತೆ



ಭಾಲ್ಕಿ:ಸೆ.30: ಇಲ್ಲಿಯ ಹಿರೇಮಠ ಸಂಸ್ಥಾನದಲ್ಲಿ ವಿಜಯ ದಶಮಿ ಅಂಗವಾಗಿ ಗುರುವಾರ ಬೆಳಿಗ್ಗೆ 10 ಗಂಟೆಗೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ದಿವ್ಯ ಸಾನ್ನಿಧ್ಯದಲ್ಲಿ ಮರಣವೇ ಮಹಾನವಮಿ ಮತ್ತು ಕಲ್ಯಾಣ ಕ್ರಾಂತಿ ವಿಜಯೋತ್ಸವ ಕಾರ್ಯಕ್ರಮ ಜರುಗಲಿದೆ.

ಸಂಸದ ಸಾಗರ ಖಂಡ್ರೆ ಧರ್ಮಗ್ರಂಥ ಪಠಣ ಮಾಡಲಿದ್ದಾರೆ. ಮಾಜಿ ಶಾಸಕ ಪ್ರಕಾಶ ಖಂಡ್ರೆ ಬಸವ ಗುರುವಿನ ಪೂಜೆ ನೆರವೇರಿಸುವರು.

ಕು. ಕವನ ಶಾಂತಯ್ಯ ಸ್ವಾಮಿ ಕು.ಶ್ರೀದೇವಿ ಮಾರುತಿ ಗಾಯಕವಾಡ, ಕು.ಪ್ರತೀಕ್ಷಾ ಸುರೇಶ ನುಚ್ಚಾ, ಕು. ರೇವಮ್ಮ ಮಹಾದೇವ ವಾಲೆ, ಕು. ಐಶ್ವರ್ಯ ರಮೇಶ ಮೈಲಾರೆ, ಕು.ಶ್ರೀನಿಧಿ ಸಂತೋಷ ವಾಲೆ, ಕು.ಚೈತನ್ಯ ಧನರಾಜ ಪಾಂಚಾಳ, ಕು.ಕೇತಕಿ ಬಾಬು ಕು. ಭವಾನಿ ಸಂತೋಷ ಗದಗೆ, ಕು.ಅಮೂಲ್ಯ ಸಂಜು ಕರಕಾಳೆ, ಕು.ಭವಾನಿ ಶಿವಪುತ್ರ ದಾಬಶೆಟ್ಟಿ ವಿದ್ಯಾರ್ಥಿಗಳಿಂದ ವಚನ ಪಾರಾಯಣ ನಡೆಯಲಿದೆ.

ಪ್ರಭುಲಿಂಗ ಸ್ವಾಮೀಜಿ, ಶಿವಬಸವ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ರಾಜು ಜುಬರೆ ಅವರು ಪ್ರಾರ್ಥನೆ ನಡೆಸಿಕೊಡಲಿದ್ದಾರೆ. ಸವಿತಾ ಭೂರೆ, ದೀಪಕ ಠಮಕೆ ಸೇರಿ ಮುಂತಾದವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಸಾಹಿತ್ಯ ಲೋಕಕ್ಕೆ ಗೊರೂರು ಕೊಡುಗೆ ಅನನ್ಯ

ಮಲ್ಲಮ್ಮ ನುಡಿ ವಾರ್ತೆ



ಭಾಲ್ಕಿ:ಸೆ.30:ಗೋರೂರು ರಾಮಸ್ವಾಮಿ ಅಯ್ಯಂಗಾರ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೆಯಾದ ವಿಶಿಷ್ಟ ಶೈಲಿಯ ಬರವಣಿಗೆಯ ಮೂಲಕ ಸಾಹಿತ್ಯಕ್ಷೇತ್ರ ಶ್ರೀಮಂತಗೊಳಿಸಿದ್ದಾರೆ ಎಂದು ನಿವೃತ್ತ ಪ್ರಾಂಶುಪಾಲ ಅಶೋಕ ರಾಜೋಳೆ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕ್ಯಾಡೆಮಿ ಬೆಂಗಳೂರು, ಚಕೋರ ಸಾಹಿತ್ಯ ವಿಚಾರ ವೇದಿಕೆ ಬೀದರ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಭಾಲ್ಕಿ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಗೋರೂರು ರಾಮಸ್ವಾಮಿ ಅಯ್ಯಂಗಾರ ಅವರ ಬದುಕು–ಬರಹ ಕಾರ್ಯಕ್ರಮವನ್ನು ಸಸಿಗೆ ನಿರೆರೆಯುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಸಾಹಿತಿ ಗೋರೂರು ಅವರು ಸಾಮಾಜಿಕ ಅಸಮಾನತೆ ಅಳಿಸಿ, ಸಮಾಜದಲ್ಲಿ ಬೇರೂರಿದ ಮೌಢ್ಯತೆ, ಕಂದಾಚಾರ ಹೋಗಲಾಡಿಸಿ ವೈಜ್ಞಾನಿಕ ಆಧಾರಿತ ಸಮ ಸಮಾಜ ಸ್ಥಾಪಿಸಿದರು ಎಂದರು.

ಶಿವಾಜಿ ಕಾಲೇಜಿನ ಉಪನ್ಯಾಸಕಿ ಪ್ರೊ.ಆರತಿ ಪಾತ್ರೆ ವಿಶೇಷ ಉಪನ್ಯಾಸ ನೀಡಿ, ರಾಮಸ್ವಾಮಿ ಅಯ್ಯಂಗಾರ ಅವರು ಅಪ್ಪಟ ಗಾಂಧೀವಾದಿಗಳು, ಗಾಂಧೀಜಿಯವರ ಅಸಹಕಾರ ಚಳುವಳಿಯಿಂದ ಪ್ರಭಾವಿತರಾಗಿ, ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ್ದರು. ಅಮೂಲ್ಯ ಕೃತಿಗಳ ಮೂಲಕ ಹರಿಜನೋದ್ಧಾರ, ಗ್ರಾಮೋದ್ಧಾರ ಮಾಡಿದ್ದಾರೆ ಎಂದು ತಿಳಿಸಿದರು. ಡಿಗ್ರಿ ಕಾಲೇಜಿನ ಪ್ರಾಚಾರ್ಯ ಡಾ.ಹೇಮಾವತಿ ಪಾಟೀಲ್ ಅಧ್ಯಕ್ಷತೆವಹಿಸಿದ್ದರು. ಡಾ.ನಾಗಮ್ಮ ಭಂಗರಗಿ ಆಶಯ ನುಡಿ ನುಡಿದರು. ಕಸಾಪ ಅಧ್ಯಕ್ಷ ನಾಗಭೂಷಣ ಮಾಮಡಿ ಅವರು ಗೋರೂರು ರಾಮಸ್ವಾಮಿ ಅವರ ಸಾಹಿತ್ಯಕೃಷಿ ಮೇಲೆ ಬೆಳಕು ಚೆಲ್ಲಿದರು. ಜಯಶ್ರೀ, ಮೀನಾಕ್ಷಿ ,ಡಾ.ಸಹನಾ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಚಕೋರ ಸಾಹಿತ್ಯ ವಿಚಾರ ವೇದಿಕೆ ಜಿಲ್ಲಾ ಸಂಚಾಲಕಿ ಡಾ.ಮಕ್ತುಂಬಿ ಎಮ್.ನಿರೂಪಿಸಿದರು.ಡಾ.ಸಂಪತಕುಮಾರಿ ವಂದಿಸಿದರು.

# ಸೌಹಾರ್ದ ಸಹಕಾರಿಗಳು ನಿರಂತರ ತರಬೇತಿಯಲ್ಲಿ ಭಾಗವಹಿಸಿ: ಗುರುನಾಥ ಜ್ಯಾಂತಿಕರ್




ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 30 : ಸಹಕಾರಿ ಸಂಘಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗಲು ನಿರಂತರವಾಗಿ ಸಹಕಾರಿ ಸಂಘಗಳ ಅಧ್ಯಕ್ಷರು ಹಾಗೂ ನಿರ್ದೇಶಕರು ತರಬೇತಿಯಲ್ಲಿ ನಿರಂತರವಾಗಿ ಭಾಗವಹಿಸಬೇಕೆಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರಿನ ನಿರ್ದೇಸಕರಾದ ಗುರುನಾಥ ಜ್ಯಾಂತಿಕರ್ ತಿಳಿಸಿದರು. ಮಂಗಳವಾರ ನೌಬಾದನ ಸಹಾರ್ದ ತರಬೇತಿ ಸಂಸ್ಥೆಯಲ್ಲಿ ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ನಿರ್ದೇಶಕ ಮಂಡಳಿಗೆ ಹಮ್ಮಿಕೊಂಡಿದ್ದ ವಿಷಯಾಧಾರಿತ ತರಬೇತಿ ಉದ್ಘಾಟಿಸಿ ಅವರು ಮಾತನಾಡಿದರು. ಸಹಕಾರ ಸಂಘದ ಮೇಲೆ ಸಾಕಷ್ಟು ಜವಾಬ್ದಾರಿಯಿದೆ. ಸಹಕಾರಿ ಸಂಘದಿಂದ ಬಡವರು, ದೀನ ದುರ್ಬಲರು, ಆರ್ಥಿಕವಾಗಿ ಹಿಂದುಳಿದವರು ಮುಂದೆ ಬರಲು ಸಾಧ್ಯವಾಗುತ್ತದೆ. ಈ ನಿಮಿತ್ಯವಾಗಿ ಯಶಸ್ವಿಯಾಗಿ ಸಹಕಾರಿ ಸಂಘಗಳನ್ನು ಮುನ್ನಡೆಸಿಕೊಂಡು ಹೋಗಲು ತರಬೇತಿಗಳು, ಕಾರ್ಯಾಗಾರಗಳು ಸಹಕಾರಿಗಳಿಗೆ ಹೊಸ ಅನುಭವಗಳನ್ನು ನೀಡುತ್ತವೆ ಎಂದರು. ತರಬೇತಿಯಲ್ಲಿ ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಬಸವರಾಜ ಹುಡುಗೆ ಹಾಗೂ ಸಂಜಯ್ ಕ್ಯಾಸಾ ಮತ್ತು ವಿಭಾಗೀಯ ಅಧಿಕಾರಿಗಳಾದ ಸೂರ್ಯಕಾಂತ್ ರಾಖಲೆ ಇವರು ಭಾಗವಹಿಸಿದರು. ತರಬೇತಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಅಧಿನಿಯಮ 2025 ರ ಕುರಿತು ಸಮಗ್ರವಾಗಿ ಸೂರ್ಯಕಾಂತ್ ರಾಖಲೆ ಅವರು ಸಹಕಾರಿಗಳಿಗೆ ತಿಳಿಸಿಕೊಟ್ಟರು. ಮತ್ತು ಸಹಕಾರಿ ಸಂಘದ ನಿರ್ದೇಶಕರಿಗೆ ಹಕ್ಕು ಮತ್ತು ಕರ್ತವ್ಯಗಳ ಕುರಿತು ತರಬೇತಿ ನೀಡಲಾಯಿತು. ಅದರ ಕುರಿತು ಮಾಹಿತಿ ಕೊಡಲಾಯಿತು. ತರಬೇತಿಯಲ್ಲಿ ಬೀದರ ಜಿಲ್ಲೆಯ ನೂರಾರು ಜನರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

# ಟೆಂಡರ್ ಪ್ರಕ್ರಿಯೆಯಲ್ಲಿ ಸರ್ಕಾರಿ ನಿಯಮ ಗಾಳಿಗೆ : ಗೌತಮ ಪ್ರಸಾದ



ಬೀದರ.ಸೆ. 30 : ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಸತಿ ನಿಲಯಗಳಿಗೆ ಆಹಾರಧಾನ್ಯ ವಿತರಣೆ ಟೆಂಡರ್ ಮುಗಿದಿದ್ದು, ಹೊಸದಾಗಿ ಟೆಂಡರ್ ಕರೆಯಲಾಗಿದೆ. ಈ ವಿಷಯದಲ್ಲಿ ಟೆಂಡರ್ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಕಡತದಲ್ಲಿ ಗೊಂದಲ ಮೂಡಿಸಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಜಿಲ್ಲಾಧಿಕಾರಿಗಳಿಗೆ ಮುಜುಗರ ಉಂಟು ಮಾಡಿದ್ದಾರೆ. ಟೆಂಡರ್ ಕರೆಯುವಲ್ಲಿ ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂದು ದ್ರಾವಿಡ ಕ್ರಾಂತಿ ಯುವಸೇನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಗೌತಮ ಪ್ರಸಾದ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಯಾರೇ ಟೆಂಡರ್ ತೆಗೆದುಕೊಂಡರೂ ಅವರ ವಿರುದ್ಧ ಕೋರ್ಟ್ನಲ್ಲಿ ಸ್ಟೇ ತಂದು ಸರ್ವಾಧಿಕಾರಿ ಧೋರಣೆ ತಾಳುತ್ತಿರುವ ಮೇ. ಬಸವೇಶ್ವರ ಎಂಟರ್‌ಪ್ರೈಸೆಸ್‌ನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಅದರ ಮಾಲಿಕರಿಗೆ ಶಿಕ್ಷೆ ವಿಧಿಸಬೇಕೆಂದು ತಿಳಿಸಿದರು.

ಟೆಂಡರ್ ಪಾರದರ್ಶಕವಾಗಿ ಮಾಡದೆ ಸಮಿತಿಯ ಕೆಲವು ಸದಸ್ಯರು ಬಿಡ್‌ದಾರರ ಲಾಬಿಗೆ ಒಳಗಾಗಿ ಎಲ್2 ಇರುವವರಿಗೆ ಆದೇಶ ಮಾಡುವ ಹಂತಕ್ಕೆ ಹೋಗಿರುತ್ತಾರೆ. ಹೊಸ ಟೆಂಡರ್‌ದಾರರು ಈ ಮೊದಲೇ ಬಿಡ್‌ದಾರರ ಜೊತೆ ಒಪ್ಪಂಡ ಮಾಡಿಕೊಂಡು ಮುಚ್ಚಿದ ಲಕೋಟೆಯಲ್ಲಿ ಇರಬೇಕಾಗಿದ್ದ ಸರಾಸರಿ ದರಗಳನ್ನು ಬಿಡ್‌ದಾರರಿಗೆ ನೀಡಲಾಗಿದೆ.

ಕೆಟಿಪಿಪಿ ನಿಯಮದಂತೆ ಹೊಸ ಟೆಂಡರ್ ಆದೇಶ ಆಗುವವರೆಗೆ ಹಳೆ ಟೆಂಡರ್‌ದಾರರಿಗೆ ಮುಂದುವರೆಸಬೇಕು. ಹೊಸದಾಗಿ ಬಂದ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಭಾರ ಪಡೆದ ತಕ್ಷಣವೇ ಆಹಾರಧಾನ್ಯ ಟೆಂಡರ್ ಕಡತ ತೆಗೆದುಕೊಂಡು, ಬಸವೇಶ್ವರ ಎಂಟರ್‌ಪ್ರೈಸೆಸ್ ಬಿಡ್‌ದಾರರ ಜೊತೆ ಸೇರಿಕೊಂಡು ಆದೇಶ ರದ್ದಾದರೂ ಪರವಾಗಿಲ್ಲ ಅಕ್ಟೋಬರ್ 2025ನೇ ತಿಂಗಳಿಗೆ ನೀವೇ ಸರಬರಾಜು ಮಾಡುವಂತೆ ಡಿಸಿಯವರ ಗಮನಕ್ಕೂ ತಾರದೆ, ಕಡತದಲ್ಲಿ ಅನುಮತಿಯೂ ಪಡೆಯದೆ ಸೆ. 25 ರಂದು ಡಿಸಿಯವರ ಪತ್ರಕ್ಕೆ ವಿರುದ್ಧವಾಗಿ ಪತ್ರ ಬರೆದು ಇಂಡೆಂಟ್ ತಡೆಹಿಡಿಯಲು ನಿರ್ದೇಶನ ನೀಡಿದ್ದಾರೆ ಎಂದು ಆರೋಪಿಸಿದರು.

ಇದೀಗ ಟೆಂಡರ್ ಪಡೆದಿರುವ ಜನತಾ ಬಜಾರ್ ಸಂಸ್ಥೆಯಿಂದ ದೀನ ದಲಿತರ ಮಕ್ಕಳಿಗೆ ಪೌಷ್ಟಿಕ ಉತ್ತಮ ಗುಣಮಟ್ಟದ ಆಹಾರ ಸಿಗುವುದಿಲ್ಲ. ಹೀಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ಪ.ಜಾತಿ, ಪ.ಪಂಗಡದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸ ಟೆಂಡರ್ ಆಗುವವರೆಗೆ ಹಿಂದಿನ ಹಳೆಯ ಟೆಂಡರ್‌ದಾರರಿಗೆ ಆಹಾರ ಧಾನ್ಯ ಪಡೆಯಲು ನಿರ್ದೇಶನ ನೀಡಬೇಕೆಂದು ಒತ್ತಾಯಿಸಿದರು.

ದಲಿತ ಮುಖಂಡರಾದ ವಿನೀತ ಗಿರಿ ಮಾತನಾಡಿ ಟೆಂಡರ್‌ನಲ್ಲಿ ಪಾರದರ್ಶಕತೆ ಕಾಪಾಡದಿದ್ದರೆ ಡಿಸಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದರು. ದ್ರಾವಿಡ ಕ್ರಾಂತಿ ಯುವ ಸೇನೆಯ ಪ್ರಧಾನ ಕಾರ್ಯದರ್ಶಿ ಗಗನ ಫುಲೆ ಮಾತನಾಡಿದರು. ಇದೇ ವೇಳೆ ಸುದ್ದಿಗೋಷ್ಠಿಯಲ್ಲಿ ದಲಿತ ಯುವ ಮುಖಂಡರಾದ ರಮೇಶ ಮಾಲೆ ಹಾಜರಿದ್ದರು.

# ಬೀದರ್ ಕೋಟೆ ಸಂರಕ್ಷಣೆಗೆ ಬೇಕಿದೆ ಕಾಳಜಿ



ಬೀದರ. ಸೆ. 30 : ಐತಿಹಾಸಿಕ ಕೋಟೆ, ಕೊತ್ತಲಗಳನ್ನು ಹೊಂದಿರುವ ಅಪರೂಪದ ಕೆಲವೇ ನಗರಗಳಲ್ಲಿ ಬೀದರ್ ಕೂಡ ಒಂದು. ನಗರದ ಬಹಮನಿ ಕೋಟೆ, ಮಹಮೂದ್ ಗಾವಾನ್ ಮದರಸಾದಂತಹ ಸ್ಮಾರಕಗಳಿಂದ ಬೀದರ್‌ಗೆ ಅದರದ್ದೇ ಆದ ಗುರುತು ಇದೆ.

ಆದರೆ, ಅಸ್ಮಿತೆಯ ಪ್ರತೀಕದಂತಿರುವ ಈ ಸ್ಮಾರಕಗಳನ್ನು ಕಾಳಜಿ ವಹಿಸಿ ಸಂರಕ್ಷಿಸುವುದು ಕೂಡ ಅಷ್ಟೇ ಪ್ರಮುಖವಾದದ್ದು.

ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಆದರೆ, ಅದರ ದೇಖ–ರೇಖಿ ವಿಷಯ ಬಂದಾಗ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದೆ ಅನಿಸುತ್ತಿದೆ.


ರಾಜ್ಯದ ಹಂಪಿ, ಬಾದಾಮಿ ಸೇರಿದಂತೆ ಇತರೆ ಸಂರಕ್ಷಿತ ಸ್ಮಾರಕಗಳಿಗೆ ಸಿಗುವ ಪ್ರಾಧ್ಯಾನತೆ ಬೀದರ್ ಕೋಟೆಗೆ ಸಿಗುತ್ತಿಲ್ಲ. ಈ ಸ್ಥಳಗಳಲ್ಲಿ ಸತತವಾಗಿ ನಡೆಯುತ್ತಿರುವ ಜೀರ್ಣೋದ್ಧಾರ ಕೆಲಸಗಳೇ ಇದಕ್ಕೆ ಸಾಕ್ಷಿ. ಹಾಗಂತ ಬೀದರ್ ಕೋಟೆಯಲ್ಲಿ ಏನೂ ನಡೆಯುತ್ತಿಲ್ಲ ಎಂದರ್ಥವಲ್ಲ. ಆದರೆ, ಯಾವ ಮಟ್ಟಿಗೆ ಜೀರ್ಣೋದ್ಧಾರ ಕೆಲಸವಾಗಬೇಕು ಅಷ್ಟರಮಟ್ಟಿಗೆ ಆಗುತ್ತಿಲ್ಲ ಎನ್ನುವುದು ಸ್ಥಳೀಯರ ಕೊರಗು.

15ನೇ ಶತಮಾನದಲ್ಲಿ ಬಹಮನಿ ಮನೆತನದ ಸುಲ್ತಾನ್ ಅಹಮ್ಮದ್ ಷಾ ಕಲಬುರಗಿಯಿಂದ ಬೀದರ್‌ಗೆ ತನ್ನ ರಾಜಧಾನಿ ಸ್ಥಳಾಂತರಿಸಿ, ಬಳಿಕ ಕೋಟೆ ನಿರ್ಮಿಸಿದ್ದ. ಕೋಟೆಯ ಒಳಭಾಗದಲ್ಲಿ ತನಗೇ ಅನುಕೂಲವಾಗುವ ನಿಟ್ಟಿನಲ್ಲಿ ಅನೇಕ ಅಪರೂಪದ ವಾಸ್ತುಶಿಲ್ಪ ಹೊಂದಿರುವ ಕಟ್ಟಡಗಳನ್ನು ನಿರ್ಮಿಸಿದ್ದ. ಅದರಲ್ಲಿ 'ಗಗನ್ ಮಹಲ್', 'ಕುತ್ತೇ ಖಾನಾ' ಕೂಡ ಒಂದು. ಈಗ ಈ ಎರಡೂ ಸ್ಮಾರಕಗಳ ಗೋಡೆಗಳು ಕುಸಿದು ಬಿದ್ದಿವೆ. ಈ ಸ್ಮಾರಕಗಳನ್ನು ತುರ್ತಾಗಿ ಮೊದಲಿನಂತೆ ದುರಸ್ತಿಗೊಳಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಅಧಿಕಾರಿಗಳು ಏನೆನ್ನುತ್ತಾರೆ? 'ಮಳೆಯಿಂದ 'ಕುತ್ತೇ ಖಾನಾ' ಹಾಗೂ 'ಗಗನ್ ಮಹಲ್' ಸ್ಮಾರಕಕ್ಕೆ ಧಕ್ಕೆ ಆಗಿರುವುದು ಗಮನಕ್ಕೆ ಬಂದಿದೆ. ಈ ವಿಷಯವನ್ನು ಈಗಾಗಲೇ ಕೇಂದ್ರ ಕಚೇರಿಯ ಗಮನಕ್ಕೆ ತರಲಾಗಿದೆ. ಅಲ್ಲಿಂದ ನಿರ್ದೇಶನ ಬಂದ ನಂತರ ದುರಸ್ತಿಗೊಳಿಸಲಾಗುವುದು. ಇತರೆ ಸ್ಮಾರಕಗಳ ಜೀರ್ಣೋದ್ಧಾರದ ಪ್ರಸ್ತಾವ ಇದೆ' ಎಂದು ಹೆಸರು ಹೇಳಲಿಚ್ಛಿಸದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಬೀದರ್ ವಿಭಾಗದ ಅಧಿಕಾರಿ ತಿಳಿಸಿದ್ದಾರೆ.

ಯಾವ್ಯಾವ ಸ್ಮಾರಕಗಳಿಗೆ ಹಾನಿ? ಕಳೆದ ಎರಡು ತಿಂಗಳಿಂದ ಬೀದರ್ ಜಿಲ್ಲೆಯಾದ್ಯಂತ ವ್ಯಾಪಕ ಮಳೆಯಾಗುತ್ತಿದೆ. ಸತತ ಮಳೆಗೆ ಬೆಳೆ ಮನೆಗಳಿಗೆ ಹಾನಿ ಉಂಟಾಗಿದೆ. ಸ್ಮಾರಕವೂ ಅದಕ್ಕೆ ಹೊರತಾಗಿಲ್ಲ. ಆಗಸ್ಟ್ 28ರಂದು ಕೋಟೆಯ 'ಕುತ್ತೇ ಖಾನಾ' ಬದಿಯ ಗೋಡೆ ಕುಸಿದು ಬಿದ್ದರೆ ಸೆಪ್ಟೆಂಬರ್ 24ರಂದು 'ಗಗನ್ ಮಹಲ್' ಸ್ಮಾರಕ ಮೇಲ್ಭಾಗದ ಗೋಡೆ ಕುಸಿದು ಬಿದ್ದಿದೆ. ತಾತ್ಕಾಲಿಕವಾಗಿ ಅದರ ಮೇಲೆ ಪ್ಲಾಸ್ಟಿಕ್ ಹೊದಿಕೆ ಹಾಕಲಾಗಿದೆ. ಇತರೆ ಸ್ಮಾರಕಗಳಿಗೂ ಈ ಭೀತಿ ಎದುರಾಗಿದ್ದು ತುರ್ತು ಕ್ರಮ ಕೈಗೊಳ್ಳಬೇಕೆನ್ನುವುದು ಸ್ಮಾರಕಪ್ರಿಯರ ಹಕ್ಕೊತ್ತಾಯ.

# ಸಾವಳಿ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿದ ನ್ಯಾ.ಪ್ರಕಾಶ ಅರ್ಜುನ ಬನಸೋಡೆ



ಬೀದರ,ಸೆ.30:ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಕಾಶ ಅರ್ಜುನ ಬನಸೋಡೆ ಅವರಿಂದು ಸಾವಳಿ ಗ್ರಾಮದ ಮನೆಗಳಲ್ಲಿ ನೀರು ಹೋಗಿ ಅಲ್ಲಿನ ಜನರಿಗೆ ತೊಂದರೆಯಾಗಿರುವ ನಿಮಿತ್ಯ ಸ್ಥಳಕ್ಕೆ ಭೇಟಿ ನೀಡಿ ನಂತರ ಕಾಳಜಿ ಕೇಂದ್ರದಲ್ಲಿರುವ ಜನರನ್ನು ಭೇಟಿ ಮಾಡಿ ಅವರ ಸಮಸ್ಯೆಗಳನ್ನು ಆಲಿಸಿದರು.

ನಂತರ ಕಮಲನಗರ ತಾಲೂಕಿನ ಮಳೆಯಿಂದ ಹಾನಿಯಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಕಮಲನಗರ ತಹಶೀಲ್ದಾರರು ಜನರಿಗೆ ಸೂಕ್ತ ರಕ್ಷಣೆಯನ್ನು ಒದಗಿಸಿರುವುದನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಕಮಲನಗರ ತಾಲೂಕಿನ ತಹಶೀಲ್ದಾರರು, ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಕಮಲನಗರ ಮತ್ತು ಠಾಣಾಕುಶನೂರ ಪೋಲಿಸ ಠಾಣೆಯ ಪಿ.ಎಸ.ಐ ರವರು ಮತ್ತು ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.

# ಉಚ್ಚನ್ಯಾಯಾಲಯದ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಗೀತಾ ಕಡಬಾ ಭರತರಾಜ್ ಶೆಟ್ಟಿ, ಮುರಳೀಧರ ಪೈ ಬೋರಕಟ್ಟಿ ಹಾಗೂ ತ್ಯಾಗರಾಜ್ ನಾರಾಯಣ್ ಅವರು ಅಧಿಕಾರ ಸ್ವೀಕಾರ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು, ಸೆ 30 :ಕರ್ನಾಟಕ ಉಚ್ಚನ್ಯಾಯಾಲಯದ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಶ್ರೀಮತಿ ಗೀತಾ ಕಡಬಾ ಭರತರಾಜ್ ಶೆಟ್ಟಿ, ಮುರಳೀಧರ ಪೈ ಬೋರ್‌ಕಟ್ಟಿ ಹಾಗೂ ತ್ಯಾಗರಾಜ್ ನಾರಾಯಣ್ ಇನಾವಲ್ಲಿ ಅವರು ಅಧಿಕಾರ ಸ್ವೀಕರಿಸಿದರು.

ಇಂದುಹೈಕೋರ್ಟನಸಭಾಂಗಣದಲ್ಲಿ ಹಮ್ಮಿಕೊಳ್ಳಲಾದಸರಳಸಮಾರಂಭದಲ್ಲಿ ಮುಖ್ಯ ನ್ಯಾಯಮೂರ್ತಿಗಳಾದ ವಿಭು ಭಕ್ರು ಅವರ ಸಮ್ಮುಖದಲ್ಲಿ ಎಲ್ಲಾನ್ಯಾಯಮೂರ್ತಿಗಳು ಅಧಿಕಾರ ಸ್ವೀಕರಿಸಿದರು.

ಗೌರವಾನ್ವಿತನ್ಯಾಯಮೂರ್ತಿಗಳಾದ ಶ್ರೀಮತಿ ಗೀತಾ ಕಡಬಾ ಭರತರಾಜ್ ಶೆಟ್ಟಿ ಅವರು, 22ನೇ ಏಪ್ರಿಲ್ 1966 ರಂದು ಕೆ ಎನ್ ಭರತರಾಜ್ ಮತ್ತು ಶ್ರೀಮತಿ ಕೆ ಬಿ ನಾಗರತ್ನ ರವರ 4ನೇ ಸುಪುತ್ರಿಯಾಗಿ ಶಿವಮೊಗ್ಗದಲ್ಲಿ ಜನಿಸಿದ ಇವರು, ಪ್ರಾಥಮಿಕ ಶಿಕ್ಷಣದಿಂದ ದ್ವಿತೀಯ ಪಿಯುಸಿ ವರೆಗೂ ಶಿವಮೊಗ್ಗದ ದೇಶಿಯಾ ವಿದ್ಯಾ ಶಾಲೆಯಲ್ಲಿ ಅಭ್ಯಾಸ ಮಾಡಿದರು. 1986 ರಲ್ಲಿ ಶಿವಮೊಗ್ಗದ ಸಹ್ಯಾದ್ರಿ ಕಾಲೇಜನಲ್ಲಿ 8 ನೇ ರ್ಯಾಂಕ್ ಗಳಿಸಿ ಬಿ.ಎ ಪದವಿಯನ್ನು ಪಡೆದಿದ್ದಾರೆ. 1988 ರಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತ-ಕೋತ್ತರ ಪದವಿಯನ್ನು ಸಹ ಪೂರ್ಣಗೊಳಿಸಿರುತ್ತಾರೆ. 1991 ರಲ್ಲಿ ಕಾನೂನು ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪೂರ್ಣಗೊಳಿಸಿ, 1993 ರಲ್ಲಿ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ 4 ಬಂಗಾರದ ಪದಕಗಳನ್ನು ಕಾನೂನು ಮತ್ತು ಸಂಸ್ಕೃತ ವಿಷಯದಲ್ಲಿ ಪಡೆದಿರುತ್ತಾರೆ.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ಜುಲೈ 1991 ರಲ್ಲಿ ನೋಂದಣಿ ಮಾಡಿಸಿಕೊಂಡು, ಶಿವಮೊಗ್ಗದ ಹಿರಿಯ ವಕೀಲರಾದ ಶ್ರೀನಿವಾಸ್ ರಾವ್ ರವರ ಕಛೇರಿಯಲ್ಲಿ 1991ರಲ್ಲಿ ಕಿರಿಯ ವಕೀಲರಾಗಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. 11ನೇ ಫೆಬ್ರವರಿ 1992ರಲ್ಲಿ ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡು, ಚಿಕ್ಕಮಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸೇವೆಯನ್ನು ಸಲ್ಲಿಸಿರುತ್ತಾರೆ. 2004 ರಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ಬಡ್ತಿ ಹೊಂದಿದ ಮೇಲೆ ಮಂಡ್ಯ, ಶಿರಾ ಹಾಗೂ ತುಮಕೂರು ಜಿಲ್ಲೆಯಲ್ಲಿ ಹಾಗೂ 5ನೇ ಆಗಸ್ಟ್ 2009 ರಿಂದ ತುಮಕೂರು, ತಿಪಟೂರಿನಲ್ಲಿ ತ್ವರಿತ ನ್ಯಾಯಾಲಯದ ನ್ಯಾಯಾಧೀಶರಾಗಿ ಹಾಗೂ 01ನೇ ಜೂನ್ 2013 ರಂದು ತುಮಕೂರಿನ ಜಿಲ್ಲಾ ನ್ಯಾಯಾಧೀಶರಾಗಿ ಸೇವೆಯನ್ನು ಸಲ್ಲಿಸಿದ್ದು, ಹೆಚ್ಚುವರಿ ಅಪರ ಜಿಲ್ಲಾ ನ್ಯಾಯಾಧೀಶರಾಗಿ ತಿಪಟೂರು ಹಾಗೂ ಅಪರ ಸಿಟಿ ಸಿವಿಲ್ ನ್ಯಾಯಾಧೀಶರಾಗಿ ಬೆಂಗಳೂರು ಮತ್ತು ವಿಜಯಪುರದಲ್ಲಿ ಸೇವೆ ಸಲ್ಲಿಸಿರುತ್ತಾರೆ. ಗೌರವಾನ್ವಿತ ನ್ಯಾಯಮೂರ್ತಿಗಳು ವಿಜಯಪುರದ ಕಾರ್ಮಿಕ ನ್ಯಾಯಾಲಯದಲ್ಲಿ ಮತ್ತು ಕೌಟುಂಬಿಕ ನ್ಯಾಯಾಲಯ ಬೆಂಗಳೂರಿನಲ್ಲಿ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿಯಲ್ಲಿ ಅಧ್ಯಕ್ಷರಾಗಿಯೂ ಸೇವೆಯನ್ನು ಸಹ ಸಲ್ಲಿಸಿರುತ್ತಾರೆ.

ಗೌರವಾನ್ವಿತನ್ಯಾಯಮೂರ್ತಿಗಳಾದ ಮುರಳೀಧರ ಪೈ ಬೊರ್‌ಕಟ್ಟೆರವರು 31ನೇ ಡಿಸೆಂಬರ್ 1966 ರಂದು ದಿವಂಗತ ಬಿ ದಾಮೋದರ ಪೈ ಮತ್ತು ದಿವಂಗತ ಶ್ರೀಮತಿ ಬಿ ಲಕ್ಷ್ಮೀ ಡಿ ಪೈ ರವರ 9 ನೇ ಹಾಗೂ ಕೊನೆಯ ಸುಪುತ್ರನಾಗಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ಜನಿಸಿರುತ್ತಾರೆ. ಬೊರ್‌ಕಟ್ಟೆಯ ಶ್ರೀರಾಮಪುರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿ, 8ನೇ ತರಗತಿಯಿಂದ ದ್ವಿತೀಯ ಪಿಯುಸಿಯನ್ನು ಸರ್ಕಾರಿ ಜೂನಿಯರ್ ಕಾಲೇಜ್, ಕಾರ್ಕಳದಲ್ಲಿ ಹಾಗೂ ಕಾನೂನು ಪದವಿಯನ್ನು ಉಡುಪಿಯ ವೈಕುಂಠ ಬಾಳಿಗಾ ಕಾನೂನು ಕಾಲೇಜನಲ್ಲಿ ಪೂರೈಸಿರುತ್ತಾರೆ.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ 17ನೇ ಆಗಸ್ಟ್ 1990 ರಂದು ನೋಂದಣಿ ಮಾಡಿಸಿಕೊಂಡು, ಹಿರಿಯ ವಕೀಲರಾದ ಸಿ. ಎನ್. ಕಾಮತ್ ಅವರ ಕಚೇರಿಯಲ್ಲಿ ಕಿರಿಯ ವಕೀಲರಾಗಿ ಸೇವೆಯನ್ನು ಪ್ರಾರಂಭಿಸಿ, 6 ವರ್ಷಗಳ ಕಾಲ ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಹಾಗೂ ಕನಾಟಕ ಉಚ್ಚನ್ಯಾಯಾಲಯದಲ್ಲಿ ವಕೀಲಿ ವೃತ್ತಿಯನ್ನು ಮಾಡಿದ್ದಾರೆ. 12ನೇ ಫೆಬ್ರವರಿ 1997 ರಲ್ಲಿ ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡು, ಮೈಸೂರು, ಹೊಳೇನರಸಿಪುರ ಹಾಗೂ ಸಂಕೇಶ್ವರದಲ್ಲಿ ಸೇವೆಯನ್ನು ಸಲ್ಲಿಸಿ 2004 ರಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ಬಡ್ತಿ ಹೊಂದಿ ಕಲಬುರ್ಗಿ ಮತ್ತು ತುರುವೇಕೆರೆಯಲ್ಲಿ ಹಾಗೂ ಲಘು ವ್ಯವಹಾರಗಳ ನ್ಯಾಯಾಲಯದಲ್ಲಿ ಸೇವೆಯನ್ನು ಸಲ್ಲಿಸಿರುತ್ತಾರೆ ಹಾಗೂ 2009 ರಿಂದ 2013 ರವರೆಗೂ ಚೆನ್ನರಾಯಪಟ್ಟಣದ ತ್ವರಿತ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

2013ರಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಬಡ್ತಿ ಪಡೆದು, ಬೆಂಗಳೂರಿನ 39ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ, ರಾಷ್ಟ್ರೀಯ ತನಿಖಾ ಸಂಸ್ಥೆಯ ಪ್ರಕರಣಗಳ ವಿಚಾರಣೆಯ ಪ್ರತ್ಯೇಕ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಹಾಗೂ ಹಿರಿಯ ಅಧ್ಯಾಪಕ ಸದಸ್ಯರಾಗಿ ಕರ್ನಾಟಕ ನ್ಯಾಯಾಂಗ ಅಕಾಡೆಮಿ ಬೆಂಗಳೂರಿನಲ್ಲಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಗೌರವಾನ್ವಿತನ್ಯಾಯಮೂರ್ತಿಗಳು, ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣಗಳ ವಿಶೇಷ ವಿಚಾರಣಾ ನ್ಯಾಯಾಲಯ ಮಂಗಳೂರಿನಲ್ಲಿ ನ್ಯಾಯಾಧೀಶರಾಗಿ ಸೇವೆಸಲ್ಲಿಸಿ, ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಮಂಗಳೂರು ಮತ್ತು ಬೆಳಗಾವಿಯಲ್ಲಿ ಸೇವೆಯನ್ನು ಸಲ್ಲಿಸಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿಯೂ ಸಹ ವಿಲೇಖನಾಧಿಕಾರಿಗಳಾಗಿ ಕಾರ್ಯನಿರ್ವಹಿಸಿರುತ್ತಾರೆ. ಕರ್ನಾಟಕ ಉಚ್ಚನ್ಯಾಯಾಲಯದ ವಿಲೇಖನಾಧಿಕಾರಿಗಳಾಗಿರುವಾಗ ಅವರ ಸೇವೆ ಅಪಾರವಾಗಿರುತ್ತದೆ.

ಗೌರವಾನ್ವಿತನ್ಯಾಯಮೂರ್ತಿಗಳಾದ ತ್ಯಾಗರಾಜ್ ನಾರಾಯಣ್ ಇನಾವಲ್ಲಿ ಅವರು 9ನೇ ಸೆಪ್ಟೆಂಬರ್ 1967 ರಂದು ದಿವಂಗತ ನಾರಾಯಣ ಇನಾವಲ್ಲಿ ಮತ್ತು ದಿವಂಗತ ಶ್ರೀಮತಿ ಲೀಲಾವತಿ ಕೆ.ಪಿ.ಎನ್ ಇನಾವಲ್ಲಿ ರವರ ಸುಪುತ್ರರಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಪಾವೂರ್ ಗ್ರಾಮದಲ್ಲಿ ಜನಿಸಿದ್ದು, ಪ್ರಾಥಮಿಕ ಶಿಕ್ಷಣವನ್ನು 1 ರಿಂದ 5ನೇ ತರಗತಿಯನ್ನು ಮಲರಪಡವು ಹಿರಿಯ ಪ್ರಾಥಮಿಕ ಶಾಲೆಯಲ್ಲಿ, 6 ರಿಂದ 10ನೇ ತರಗತಿಯನ್ನು ಶ್ರೀ ರಾಮಕೃಷ್ಣ ಹಿರಿಯ ಪ್ರಾಥಮಿಕ ಶಾಲೆ, ಹರೆಕಳ, ಮಂಗಳೂರು ತಾಲ್ಲೂಕಿನಲ್ಲಿ ಪೂರೈಸಿ, ಪಿಯುಸಿಯನ್ನು ಸೆಂಟ್ ಜೋಸೆಫ್ ಪಿಯು ಕಾಲೇಜ್ ಬಜ್ಪೆಯಲ್ಲಿ ಹಾಗೂ 5 ವರ್ಷದ ಕಾನೂನು ಪದವಿಯನ್ನು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜ್, ಮಂಗಳೂರಿನಲ್ಲಿ ಪೂರ್ಣಗೊಳಿಸಿರುತ್ತಾರೆ.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ನೋಂದಣಿಯಾದ ಮೇಲೆ 1990 ರಿಂದ 1996 ರವರೆಗೆ ದಿವಂಗತ ಸಿ ಪಿ ಉದಯವ ರಾಮರಾಜ್, ಹಿರಿಯ ವಕೀಲರು, ವಿಶೇಷ ಅಭಿಯೋಜಕರು ಇವರ ಬಳಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿ ತದನಂತರ ವಕೀಲರಾದ ಎಮ್ ದಾಮೋದರ್ ರವರ ಬಳಿ ವಕೀಲಿ ವೃತ್ತಿಯನ್ನು ನಡೆಸಿದಾರೆ.

1997ನೇ ಫೆಬ್ರವರಿ 11 ರಂದು ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡ ಶ್ರೀಯುತರು, ಮಾರ್ಚ್ 1997 ರಿಂದ 1999 ರವರೆಗೆ ಮಂಡ್ಯ ಜಿಲ್ಲೆಯ ಮಳವಳ್ಳಿ ನ್ಯಾಯಾಲಯದಲ್ಲಿ ಹೆಚ್ಚುವರಿ ಅಪರ ಸಿವಿಲ್ ನ್ಯಾಯಾಧೀಶರಾಗಿ, ಮೇ 1998 ರಿಂದ ಮೇ 2002 ರಲ್ಲಿ ಮೈಸೂರು ಜಿಲ್ಲೆಯ ಟಿ ನರಸೀಪುರದಲ್ಲಿ, ಮೇ 2002 ರಿಂದ ಜುಲೈ 2004 ರವರೆಗೆ ದಾವಣಗೆರೆಯ ಜಿಲ್ಲೆಯ ಜಗಳೂರಿನಲ್ಲಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಜುಲೈ 2004 ರಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ಬಡ್ತಿ ಹೊಂದಿದ ಮೇಲೆ ಜುಲೈ 2004 ರಿಂದ 2008ರ ವರೆಗೆ 1ನೇ ಹೆಚ್ಚುವರಿ ನ್ಯಾಯಾಧೀಶರಾಗಿ ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರಿನಲ್ಲಿ ಹಾಗೂ 2008 ರಿಂದ ಮೇ 2011 ರವರೆಗೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ನ್ಯಾಯಾಲಯದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ, ಮೇ 2011 ರಿಂದ ಜನವರಿ 2014ರ ವರೆಗೆ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ.2014 ರಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಬಡ್ತಿಹೊಂದಿದ ಮೇಲೆ, ಜನವರಿ 2014 ರಿಂದ ಮೇ 2017ರ ವರೆಗೆ ಮಂಡ್ಯದಲ್ಲಿ ಜಿಲ್ಲಾ ನ್ಯಾಯಧೀಶರಾಗಿ ಹಾಗೂ ಮೇ 2017 ರಿಂದ 2021 ರಲ್ಲಿ ಕರ್ನಾಟಕದ ಜನಪ್ರತಿನಿಧಿ ನ್ಯಾಯಲಯದಲ್ಲಿ ಹಾಗೂ ಕೇಂದ್ರೀಯ ತನಿಖಾ ದಳದ ವಿಚಾರಣಾ ನ್ಯಾಯಾಲಯದಲ್ಲಿಯೂ ಸಹ ಸೇವೆ ಸಲ್ಲಿಸಿ, ಮೇ 2022 ರಿಂದ ಸೆಪ್ಟೆಂಬರ ವರೆಗೆ ರಾಯಚೂರಿನಲ್ಲಿ ಹಾಗೂ ಸೆಪ್ಟೆಂಬರ್ 2022 ರಿಂದ ಫೆಬ್ರವರಿ 2023ರ ವರೆಗೆ ಲಘು ವ್ಯವಹಾರಗಳ ನ್ಯಾಯಾಲಯ ಬೆಂಗಳೂರಿನಲ್ಲಿ ಮುಖ್ಯ ನ್ಯಾಯಾಧೀಶರಾಗಿ ಹಾಗೂ ಫೆಬ್ರವರಿ 2024 ರಿಂದ ಜೂನ್ 2024 ರವೆಗೆ ಹಾಸನದಲ್ಲಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ.

ಅಧಿಕಾರ ಸ್ವೀಕರಿಸಿದ ಎಲ್ಲಾ ನ್ಯಾಯ ಮೂರ್ತಿಗಳನ್ನು ಸ್ವಾಗತಿಸಿ ಮಾತನಾಡಿದ, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷರಾದ ಮಿಟ್ಟಲಕೋಡ ಎಸ್.ಎಸ್. ಅವರು ಗೌರವಾನ್ವಿತರೆಲ್ಲರು, ನ್ಯಾಯಾದಾನ ವಿತರಣಾ ವ್ಯವಸ್ಥೆಯಲ್ಲಿ ನ್ಯಾಯಾಧೀಶರು ಮತ್ತು ವಕೀಲರು ರಥದ ಎರಡು ಚಕ್ರಗಳಿದ್ದಂತೆ ಎಂಬುದಾಗಿ ಅನೇಕ ಮಹನೀಯರುಉಲ್ಲೇಖಿಸಿದ್ದಾರೆ.ಅದರಂತೆ ಗೌರವಾನ್ವಿತ ನ್ಯಾಯಮೂರ್ತಿಗಳಿಂದ ಉತ್ಕೃಷ್ಟವಾದ ನ್ಯಾಯದಾನವನ್ನು ಬಯಸುತ್ತೇವೆ.

ಗೌರವಾನ್ವಿತನ್ಯಾಯಮೂರ್ತಿಗಳನ್ನು ನೇಮಕ ಮಾಡಿದಂತಹ ಭಾರತೀಯ ಸರ್ವೋಚ್ಚ ನ್ಯಾಯಾಲಯದ ಕೊಲಿಜಿಯಂ ನವದೆಹಲಿ ಇವರಿಗೆ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಪರವಾಗಿ ಹಾಗೂ ಸಮಸ್ತ ವಕೀಲರ ಪರವಾಗಿ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸಿ ಎಲ್ಲಾ ನ್ಯಾಯಮೂರ್ತಿಗಳಿಗೂ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ಅಡ್ವೋಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ಅಡಿಷನಲ್ ಸಾಲಿಸಿಟರ್ ಜನರಲ್ ಕೆ. ಅರವಿಂದ್ ಕಾಮತ್, ಭಾರತ ಸರ್ಕಾರದ ಉಪ ಸಾಲಿಸಿಟರ್ ಜನರಲ್ ಶಾಂತಿಭೂಷಣ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಉಪಾಧ್ಯಕ್ಷರಾದ ವಿಜಯ್ ಬಿ. ಮಾಂಗಳೇಕರ್, ಭಾರತೀಯ ವಕೀಲರ ಪರಿಷತ್ತಿನ ಸಹ-ಅಧ್ಯಕ್ಷರಾದ ವೈ.ಆರ್.ಸದಾಶಿವರೆಡ್ಡಿ, ಅಧಿಕಾರ ಸ್ವೀಕರಿಸಿದ ಹೆಚ್ಚುವರಿ ನ್ಯಾಯಮೂರ್ತಿಗಳ ಕುಟುಂಬಸ್ಥರು, ವಕೀಲರುಗಳು ಉಪಸ್ಥಿತರಿದ್ದರು.

# ಪರಿಶ್ರಮ, ಭದ್ಧತೆ ಕೃಪೆಯಿಂದ ಸಮೃದ್ಧಿ ಸಾಧ್ಯ : ರುದ್ರ ಮೂರ್ತಿ



ಮಲ್ಲಮ್ಮನುಡಿವಾರ್ತೆ ಬೀದರ.ಸೆ.30 :ವ್ಯಕ್ತಿಯ ನೂರಾರು ಪರಿವರ್ತನೆಗಳ ಜೊತೆಗೆ ಆಂತರಿಕ ಆಲೋಚನೆ ಬದಲಾವಣೆಯಾದಾಗ ಸಾಧನೆ ಸಾಧ್ಯ. ಹಾಳು ಹರಟೆಯ ಕಾಲ ಹರಣಕ್ಕಿಂತ ಧನಾತ್ಮಕ ಚಿಂತನೆ ಮನುಷ್ಯನ ವ್ಯಕ್ತಿತ್ವ ರೂಪಿಸುತ್ತದೆಂದು ಆರ್ಥಿಕ ತಜ್ಞಾರಾದ ಸಿಎ ರುದ್ರ ಮೂರ್ತಿ ನುಡಿದರು.

ಡಾ. ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ವಚನ ಸಮೂಹ ಸಂಸ್ಥೆ ಏರ್ಪಡಿಸಿದ ವಚನ ವೆಂಚರ್ಸ್ ಪ್ರಾ.ಲಿ. ಉದ್ಘಾಟಣೆ ಹಾಗೂ ಡಿಬೆಂಚರ್ ವಿತರಣ ಸಮಾರಂಭವನ್ನು ಜ್ಯೋತಿ ಪ್ರಜ್ವಲನ ಮಾಡಿದ ಸಿಎ ರುದ್ರಮೂರ್ತಿ – ಮೊದಲು ಒಳ ಮನಸ್ಸಿನಲ್ಲಿ ಸಾಹುಕಾರ ಆಗಲು ಸಿದ್ಧತೆ ಮಾಡಿಕೊಂಡ ಮೇಲೆ ಹೊರಗೆ ಸಾಹುಕಾರರಾಗಲು ಸಾಧ್ಯ. ನಮ್ಮ ಮನೋಭೂಮಿಕೆ ಮೇಲೆ ಎಲ್ಲವು ನಿರಾಭಾರವಾಗಿದೆ. ನಮ್ಮ ಸುತ್ತಲಿನ ವಾತಾವರಣ ಸಹಿತ ಸ್ವಚ್ಛಂದವಾಗಿರಬೇಕು. ಮುಖ್ಯವಾಗಿ ನಮ್ಮ ಸಂಗಾತಿಗಳು ಸಹ ಒಳ್ಳೆಯವರಾಗಿರುವದು ಅಷ್ಟೇ ಮುಖ್ಯ.ದುಡ್ಡು ಮಾಡುವದು ಸರಳ ಆದರೆ ಅದರ ಹಿಂದೆ ಪರಿಶ್ರಮ, ಬದ್ಧತೆ, ಕೃಪಾರ್ಶಿವಾದ ಇದರೆ ಆರ್ಥಿಕ ಸಧೃಡತೆ ಸಾಧ್ಯ. ಆದರ್ಶ ವ್ಯಕ್ತಿಗಳ, ಅಪ್ರತಿಮ ಸಾಧಕರ ಸಾಧನೆ ನಮ್ಮಗೆ ದಿಗ್ದರ್ಶನವಾಗಬೇಕು. ನಮ್ಮ ಯಾವುದೇ ಹೂಡಿಕೆಗೆ ಮೊದಲು ಲಾಭಕ್ಕಿಂತ ಸುರಕ್ಷತೆ ಬಗ್ಗೆ ಯೋಚನೆ ಮಾಡಲೇಬೇಕು. ಡಿಬೆಂಚರ್‌ನಲ್ಲಿ ಹಣ ಹೂಡಿಕೆಮಾಡಿದರೆ ಐಡಿಎಫ್‌ಸಿ ಬ್ಯಾಂಕ್ ಗ್ಯಾರಂಟಿ ಕೊಡುತಿರುವುದು ನಿಮ್ಮೆಲ್ಲರ ಬಂಡವಾಳಕ್ಕೆ ಸುರಕ್ಷತೆ ಎಂಬುವುದು ನಿಸ್ಸಂದೇಹವಾಗಿದೆ ಎಂದರು. ಮನುಷ್ಯನಿಗೆ ದುಡ್ಡು ಬೇಕು, ಆದರೆ ದುಡ್ಡೇ ಎಲ್ಲವೂ ಅಲ್ಲ. ಸಂಸ್ಕಾರದಿಂದ ನ್ಯಾಯ ನೀತಿ ನಿಷ್ಠೆಯಿಂದ ಗಳಿಸಿದ ಹಣ ಸಮಾಜಕ್ಕೆ ಉಪಯುಕ್ತವಾದರೆ ನಮ್ಮ ಹಿತಶತ್ರುಗಳ ಸಹ ನಮ್ಮನ್ನು ನೋಡಿ ಸಂತಸ ಪಡುವದರಲ್ಲಿ ಸಂಶಯವಿಲ್ಲವೆಂದು ನುಡಿದರು.

ಸಮೂಹ ಸಂಸ್ಥೆಯ ಚಾರ್ಟರ್ಡ ಅಕೌಂಟೆಂಟ್ ಹೈದ್ರಾಬಾದ್‌ನವರುಣ ಸಿದ್ದಾರ್ಥ ಮಾತನಾಡುತ್ತ ಇಲ್ಲಿ ಹೂಡಿಕೆ ಮಾಡಿದವರಿಗೆ ಕಾನೂನಿನ ಸವಲತ್ತುಗಳಿವೆ. ಬದ್ಧತೆ ನಂಬಿಕೆ ವಿಶ್ವಾಸ ಉಳ್ಳ ವಚನ ಸಮೂಹ ಸಂಸ್ಥೆ 15 ವರ್ಷಗಳ ನಡೆದು ಬಂದ ದಾರಿ ನಮ್ಮ ಕಣ್ಣೆದೂರಿಗಿದೆ.

ಡಿಬೆಂಚರ್ ಇದು ಹೂಡಿಕೆದಾರರಿಗೆ ಅಧಿಕೃತ ಪ್ರಮಾಣ ಪತ್ರ ನೀಡುವುದಲದೇ ಹಣಕ್ಕೆ ಭದ್ರತೆ ನೀಡಿ ಮಾನಸಿಕವಾಗಿ ಸಧೃಡವನಾಗಿಸುವದು ಕಾನೂನಾತ್ಮಕ ಡಾಕ್ಯುಮೆಂಟ್ ಯಿದಾಗಿದೆ. ಇದಕ್ಕೆ ಐಡಿಎಫ್‌ಸಿ ಬ್ಯಾಂಕ್ ಟ್ರಸ್ಟ್ ಗ್ಯಾರಂಟಿ ನೀಡಲಿದ್ದು ಹೂಡಿಕೆದಾರರು ಯಾವುದೇ ಆತಂಕಕ್ಕೆ ಒಳಗಾಗದೆ ವಿಚಲಿತಗೊಳ್ಳದೆ ನಿರಾತಂಕವಾಗಿ ವಚನ ಸಮೂಹ ಸಂಸ್ಥೆಯಲ್ಲಿ ಹಣ ವಿನಿಯೋಗಿಸಲು ಸಲಹೆ ನೀಡಿದರು.

ಮುಂಬರುವ ದಿನಗಳಲ್ಲಿ ವಚನ ಸಮೂಹ ಸಂಸ್ಥೆಗೆ ಐಪಿಓ ಪಡೆಯಲು ಒಂದು ವಿನೂತನವಾದ ಹಾಗೂ ಸಮಗ್ರವಾದ ಕಾರ್ಯಯೋಜನೆ ಸಿದ್ಧತೆ ಮಾಡಿಕೊಳ್ಳುತಿದ್ದು ರಾಜ್ಯದಲ್ಲೇ ಮಾದರಿಯ ಆರ್ಥಿಕ ಸಂಸ್ಥೆಯನ್ನಾಗಿ ಮಾರ್ಪಡಿಸಲು ನನ್ನ ಸಂಪೂರ್ಣ ಸಹಾಯ ಸಹಕಾರ ನೀಡಲು ಪ್ರಮಾಣ ಮಾಡುತೆನೆಂದು ಆತ್ಮ ವಿಶ್ವಾಸದಿಂದ ನುಡಿದರು.

ಕಾರ್ಯಕ್ರಮದ ದಿವ್ಯಾಸಾನಿಧ್ಯ ವಹಿಸಿರುವ ವಿವೇಕಾನಂದ ಆಶ್ರಮ ಪೂಜ್ಯಶ್ರೀ ಜ್ಯೋತಿರ್ಮಯಾನಂದ ಮಹಾಸ್ವಾಮಿಗಳು ಆರ್ಶಿವಚನ ನೀಡುತ್ತ ಯುವಕರಾದವರು ನಂಬಿಕೆ ಮತ್ತು ವಿಶ್ವಾಸದ ಪ್ರತೀಕವಾಗಿರಬೇಕು. ಜೀವನದಲ್ಲಿ ಗೊಂದಲಕ್ಕೀಡಾಗದೆ ಆಸೆ ಬುರುಕತನಕೆ ಜೊತುಬಿಳದೆ ಕಾಯಕ ಜೀವಿಗಳಾಗಿ ಹೊರಹೊಮ್ಮಿದರೆ ಪರಿಪೂರ್ಣ ಬದುಕಿಗೊಂದು ಲಕ್ಷಣ ಈ ಎಲ್ಲಾ ವಿಚಾರಗಳು ಅಲ್ಲಮಪ್ರಭು ನಾವದಗೇರೆಯವರಲ್ಲಿ ಸಮ್ಮಿಲನ ಗೊಂಡಿದು ನಿಶ್ಚಿಂತ ಬದುಕಿಗೆ ಇವರೇ ದೊಡ್ಡ ಉದಾಹರಣೆ ಎಂದು ನುಡಿದರು. ಕಾರ್ಯಕ್ರಮದಲ್ಲಿ ನೇತೃತ್ವ ವಹಿಸಿರುವ ಪೂಜ್ಯ ಶ್ರೀ ಡಾ ಚನ್ನಬಸವಾನಂದ ಸ್ವಾಮೀಜಿ ಚನ್ನಬಸವೇಶ್ವರ ಜ್ಞಾನಪೀಠ, ಕುಂಬಳಗೂಡು, ಬೆಂಗಳೂರು ಹಾಗೂ ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಮಹಾಸ್ವಾಮಿಗಳು, ಕಲ್ಯಾಣ ಮಹಾಮನೆ ಮಹಾಮಠ, ಗುಣತೀರ್ಥವಾಡಿ ಬಸವಕಲ್ಯಾಣ. ಸಹ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ಮಹೇಶ ಬಿರಾದಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಯಾದಗಿರ. ಪ್ರೊ. ವೀರಣ್ಣ ದಂಡೆ ನಿವೃತ್ತ ಪ್ರಾಧ್ಯಾಪಕರು ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ. ಶರಣ ಬಿ.ಜಿ.ಶೆಟಕಾರ ಅಧ್ಯಕ್ಷರು, ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಬೀದರ. ಶರಣ ಹಾವಶೆಟ್ಟಿ ಪಾಟೀಲ ಸಹಾಯಕ ಗವರ್ನರ್, ರೋಟರಿ ಕಲ್ಯಾಣ ಝೋನ್ 3160 ಜಿಲ್ಲೆ. ಶರಣ ಬಾಬು ವಾಲಿ, ರಾಜ್ಯಾಧ್ಯಕ್ಷರು, ಭಾರತೀಯ ಬಸವ ಬಳಗ, ಬೀದರ. ಶರಣ ಸುರೇಶ ಚೆನ್ನಶೆಟ್ಟಿ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಶರಣ ಶರಣಪ್ಪ ಮಿಠಾರೆ ಅಧ್ಯಕ್ಷರು, ಬಸವ ಕೇಂದ್ರ ಬೀದರ. ಶರಣ ಸೋಮಶೇಖರ ಪಾಟೀಲ ಗಾದಗಿ ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಬೀದರ. ಶರಣ ವಿಲಾಸರಾವ ಮೋರೆ ಹಿರಿಯ ನ್ಯಾಯವಾದಿಗಳು, ಬೀದರ. ಶರಣ ಸೋಮಶೇಖರ ಪಾಟೀಲ ವ್ಯವಸ್ಥಾಪಕ ನಿರ್ದೇಶಕರು, ಎಸ್.ಎಸ್.ಎಸ್.ಕೆ. ಬೀದರ. ಶರಣ ಚೇತನ ದಾಬಕೆ ಆದರ್ಶ ಕೃಷಿಕರು, ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಚನ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಅಲ್ಲಮಪ್ರಭು ನಾವದಗೇರೆ ಮಾತನಾಡುತ್ತ ನಾನು ಅತ್ಯಂತ ನಿಷ್ಠಾವಂತನಾಗಿ ಭದ್ಧತೆಯಿಂದ ಹಾಗೂ ತಮ್ಮೆಲ್ಲರ ಸದಾಶಯದ ಆರ್ಶಿವಾದದಿಂದ ಆರ್ಥಿಕ ಸಂಕಷ್ಟದ ಪಯಣದಲ್ಲಿ ದಾಪುಗಾಲು ಹಾಕಿರುವೆ. ಅನೇಕ ಸಂಕಷ್ಟಗಳ ಮಧ್ಯಯು ವಿಚಲಿತರಾಗದೆ ಗುರುಗಳಾದ ಸಿಎ ರುದ್ರ ಮೂರ್ತಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆದಿದ್ದೇನೆ. 2017ರಲ್ಲಿ ಅವರು ಕೊಟ್ಟ ತರಬೇತಿಯ ಸಂಧರ್ಭದಲ್ಲಿ ಮಾಡಿದ ಸಂಕಲ್ಪ ಇಂದು ಅವರ ಸಮ್ಮುಖದಲ್ಲಿ ಸಹಕಾರ ಗೊಂಡಿರುವುದು ನನ್ನ ಅದೃಷ್ಟ, ತಮ್ಮೆಲ್ಲರ ಆಶೀರ್ವಾದ ಹೀಗೆ ಮುಂದುವರೆಯಲಿ ಎಂದು ಪ್ರಾರ್ಥಿಸಿ ಸಾಂಕೇತಿಕವಾಗಿ 25 ಹೂಡಿಕೆದಾರರಿಗೆ ಡಿಬೆಂಚರ್ ಪ್ರಮಾಣ ಪತ್ರ ವಿತರಿಸಿದರು.

ಇದೇ ಸಂಧರ್ಭದಲ್ಲಿ ಮಕ್ಕಳ ರೋಗ ತಜ್ಞರು ಹಾಗೂ ಹಿರಿಯ ವೈದ್ಯ ದೇವರಾದ ಡಾ. ಜಿ.ಯು. ಹತ್ತಿ ಅವರ ಅಪ್ರತಿಮ ಸೇವೆಗೆ ಗೌರವಿಸಲಾಯಿತು.

ವಚನ ಮಿಡಿಯಾ ಹೌಸ್‌ನ ಮುಖ್ಯಸ್ಥರಾದ ಸಿದ್ದು ಯಾಪಲಪರವಿ ಪ್ರಾಸ್ತಾವಿಕವಾಗಿ ಮಾತನಾಡಿದರೆ, ಶಿಕ್ಷಕರಾದ ಮಲ್ಲಿಕಾರ್ಜುನ ಟಂಕಸಾಲೆ ನಿರೂಪಿಸಿದರೆ, ವಚನ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷರಾದ ಶಿವಕುಮಾರ ಸಾಲಿ ವಂದಿಸಿದರೆ ಶಿವಶಂಕರ ಟೋಕರೆ ನಿರೂಪಿಸಿದರು. ವಚನ ವರ್ಷಿಣಿ ತಂಡದ ಸಹೋದರಿಯವರ ಸಾಮೂಹಿಕ ವಚನ ಗಾಯನ ಹಾಗೂ ಉಶಾ ಪ್ರಭಾಕರ್ ನಿರ್ದೇಶನದ ನಿಪೂರ ನೃತ್ಯ ಅಕಾಡೆಮಿ ಮಕ್ಕಳ ಹಾಗೂ ಡಾ. ಪ್ರೀತಿ ರಾಜಶೇಖರ ಪಾಟೀಲ ಇವರ ನೃತ್ಯ ಸಾರ್ವಜನಿಕರ ಗಮನ ಸೆಳೆಯಿತು. ವಚನ ಪ್ರಾರ್ಥನೆಯನ್ನು ವೈಜಿನಾಥ ಸಜ್ಜನಶೆಟ್ಟಿ ನಡೆಸಿಕೊಟ್ಟರು.

# ಸಾಮರಸ್ಯದ ಬದುಕು ಶಾಂತಿಗೆ ಮೂಲ : ರಂಭಾಪುರಿ ಜಗದ್ಗುರುಗಳು

ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ–ಸಪ್ಟಂಬರ್–30.

ಬದುಕು ಭಗವಂತ ಕೊಟ್ಟ ಅಮೂಲ್ಯ ಕೊಡುಗೆ. ಜೀವನದಲ್ಲಿ ಪರಸ್ಪರ ನಂಬಿಕೆ ವಿಶ್ವಾಸಗಳು ಬಹಳ ಮುಖ್ಯ. ನಂಬಿಕೆ ಕಳೆದುಕೊಂಡರೆ ಬಾಳು ಬರಡು. ನಂಬಿಕೆ ಗಳಿಸಿಕೊಳ್ಳುವುದು ಸುಲಭದ ಮಾತಲ್ಲ. ಪರಸ್ಪರ ಸಾಮರಸ್ಯದಿಂದ ಬಾಳಿದರೆ ಎಲ್ಲೆಡೆ ಶಾಂತಿ ನೆಮ್ಮದಿ ಕಾಣಲು ಸಾಧ್ಯವಾಗುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 9ನೇ ದಿನದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಒಳ್ಳೆಯದು ಉಳಿಯಬೇಕಾದರೆ ಕೆಟ್ಟದ್ದರ ಜೊತೆಗೆ ಹೋರಾಡಬೇಕಾದದ್ದು ಅನಿವಾರ್ಯ. ಒಳ್ಳೆಯದಕ್ಕಿಂತ ಕೆಟ್ಟದ್ದು ಬಹುಬೇಗ ಬೆಳೆದು ಅಷ್ಟೇ ಬೇಗನೇ ನಾಶವಾಗುತ್ತದೆ. ಬೆಳಗುವ ಸೂರ್ಯನಿಗೆ ಮಣ್ಣು ಎರಚಿದರೆ ಅದು ಸೂರ್ಯನಿಗೆ ತಾಕುವುದಿಲ್ಲ. ಎರಚಿದವರ ಕಣ್ಣಲ್ಲಿ ಬೀಳುವುದೇ ಹೊರತು ಸಜ್ಜನರಿಗೆ ತಾಕುವುದಿಲ್ಲ. ಬಹು ಜನ್ಮಗಳ ಪುಣ್ಯದ ಫಲವಾಗಿರುವ ಈ ಮಾನವ ಜೀವನ ಸಾರ್ಥಕಪಡಿಸಿಕೊಳ್ಳುವುದು ಎಲ್ಲರ ಧ್ಯೇಯವಾಗಬೇಕು. ದಾರಿ ಚೆನ್ನಾಗಿದೆ ಎಂದು ತಪ್ಪು ದಾರಿ ತುಳಿದಾಗ ದಾರಿ ಸಾಗಬಹುದೇ ವಿನಾ ಮುಟ್ಟಬೇಕಾದ ಊರು ತಲುಪಲಾಗದು. ಗಾಳಿ ಬೀಸಿದತ್ತ ಹುಟ್ಟು ಹಾಕಿದರೆ ಹರಿಗೋಲು ಉಳಿಯಬಹುದೇ ವಿನಾ ಗುರಿ ಸೇರುವುದು ಕಷ್ಟ. ಸುಲಭವಾದದ್ದು ಶುಭಕರ ಆಗಲಾರದು. ಕಷ್ಟವೆನಿಸುವುದು ಸುಖದ ದಾರಿಗೆ ರಹದಾರಿಯಾಗಿದೆ. ಮನುಷ್ಯನಿಗೆ ಆರೋಗ್ಯ ಬೇಕು. ಆದರೆ ಆರೋಗ್ಯ ಸೂತ್ರದ ಪರಿಪಾಲನೆ ಬೇಕಾಗಿಲ್ಲ. ವಿಶ್ವವಿದ್ಯಾಲಯದ ಪದವಿ ಬೇಕು. ಆದರೆ ಅಧ್ಯಯನ ಬೇಕಾಗಿಲ್ಲ. ಶಾಸನದ ರಕ್ಷೆ ಬೇಕು. ಆದರೆ ಶಾಸನದ ರಕ್ಷಣೆ ಬೇಕಾಗಿಲ್ಲ. ಧರ್ಮ ನೀಡುವ ಫಲ ಬೇಕು. ಆದರೆ ಧರ್ಮದ ಪರಿಪಾಲನೆ ಬೇಕಾಗಿಲ್ಲ. ಪೂಜಿಸುವ ಭಜಿಸುವ ದಾರಿ ಹಲವಾದರೂ ಸೇರುವ ಗುರಿ ಒಂದೇ ಎಂದು ಬೋಧಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಮತ್ತು ಶರಣರ ಚಿಂತನ ಅರಿತು ಬಾಳಿದಾಗ ಎಲ್ಲೆಡೆ ಶಾಂತಿ ಸಮೃದ್ಧಿ ನೆಲೆಗೊಳ್ಳಲು ಸಾಧ್ಯವಾಗುತ್ತದೆ. ವೀರಶೈವ ಧರ್ಮದಲ್ಲಿ ತತ್ವಕ್ಕಿಂತ ಆಚರಣೆ, ಮಾತಿಗಿಂತ ಕೃತಿ, ಬೋಧನೆಗಿಂತ ಸಾಧನೆ, ದಾನಕ್ಕಿಂತ ದಾಸೋಹ ಚರಿತ್ರೆಗಿಂತ ಚಾರಿತ್ರ್ಯ ಬಹಳ ದೊಡ್ಡದೆಂದು ಸಾರಿದೆ. ಜೀವ ಜಗತ್ತಿಗೆ ವೀರಶೈವ ಲಿಂಗಾಯತ ಧರ್ಮ ಕೊಟ್ಟ ಕೊಡುಗೆ ಅಮೂಲ್ಯವಾದುದ್ದೆಂದು ಅರಿತು ಬಾಳುವುದು ಶ್ರೇಯಸ್ಕರ ಎಂದರು.

ಪ್ರಶಸ್ತಿ: ಧಾರ್ಮಿಕ ಮತ್ತು ಪಾರಂಪರಿಕ ಕ್ಷೇತ್ರದಲ್ಲಿ ಶ್ರೇಷ್ಠ ಸಾಧನೆ ಮಾಡಿದ ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳಿಗೆ 'ಶಿವಾಚಾರ್ಯ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಶ್ರೀ ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಸುಭಾಷ ಕಲ್ಲೂರ ಮಾತನಾಡಿ ಭಾರತೀಯ ಪುಣ್ಯ ಭೂಮಿಯಲ್ಲಿ ಹಲವಾರು ಧರ್ಮ ಪರಂಪರೆಗಳು ಬೆಳೆದು ಬಂದಿವೆ. ಆಚರಿಸುವ ಹಬ್ಬಗಳು ಜನಜೀವನದ ಮೇಲೆ ಅಪಾರವಾದ ಪ್ರಭಾವ ಬೀರಿವೆ. ಎಲ್ಲ ಜಾತಿ ಜನಾಂಗದವರು ಈ ನಾಡಿನ ಸಂಸ್ಕೃತಿಯ ಪಾವಿತ್ರ್ಯವನ್ನು ಕಾಪಾಡಿಕೊಂಡು ಬರುವುದು ಎಲ್ಲರ ಗುರಿಯಾಗಬೇಕು. ಹೃದಯ ಹಸನಗೊಂಡು ಮನಸ್ಸು ವಿಕಾಸಗೊಳ್ಳಬೇಕು. ಜನರ ಭಾವನೆಗಳು ವಿಕಾರಗೊಳ್ಳದೇ ವಿಕಾಸಗೊಳ್ಳಬೇಕು. ಜನ ಸಮುದಾಯದಲ್ಲಿ ಅರಿವು ಮತ್ತು ಜಾಗೃತಿ ಮೂಡಿ ಬರಲು ಇಂಥ ದಸರಾ ಧರ್ಮ ಸಮ್ಮೇಳನದ ಅವಶ್ಯಕತೆ ಇದೆ. ಶ್ರೀ ರಂಭಾಪುರಿ ಜಗದ್ಗುರುಗಳವರು ಆಚರಿಸಿಕೊಂಡು ಬರುತ್ತಿರುವ ದಸರಾ ಧರ್ಮ ಸಮ್ಮೇಳನ ಸಾಮರಸ್ಯ ಬದುಕಿಗೆ ಸಾಕ್ಷಿಯಾಗಿದೆ. ವೀರಶೈವ ಲಿಂಗಯತ ಎರಡೂ ಒಂದೇ ಎಂದರು.

ಕಡಕೋಳ ಶ್ರೀ ಮಡಿವಾಳೇಶ್ವರ ಮಠದ ಡಾ॥ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು. ನಿರಗೂಡಿ ಹವಾಮಲ್ಲಿನಾಥ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಎಮ್ಮಿಗನೂರು ಹಂಪಿ ಸಾವಿರದೇವರ ಮಠದ ವಾಮದೇವ ಮಹಂತ ಶಿವಾಚಾರ್ಯ ಸ್ವಾಮಿಗಳು ಜೀವ ಜಗತ್ತಿಗೆ ವೀರಶೈವ-ಲಿಂಗಾಯತ ಧರ್ಮದ ಕೊಡುಗೆ ಕುರಿತು ಅದ್ಭುತ ಉಪನ್ಯಾಸ ನೀಡಿದರು.

ಪ್ರಾಸ್ತಾವಿಕ ಮಾತನಾಡಿದ ದೇವಾಪುರ-ಸ್ಟೇಷನ್ ಬಬಲಾದನ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ದೇಶದ ಮೇಲೆ ವಿದೇಶಿಯರ ಅನೇಕ ಆಕ್ರಮಣಗಳು ಆದಾಗ್ಯೂ ನಮ್ಮ ಧರ್ಮ ತಲೆಯೆತ್ತಿ ನಿಂತಿದೆ. ಇದಕ್ಕೆ ಕಾರಣ ಈ ದೇಶದ ಸಂಸ್ಕಾರ ಮತ್ತು ಸಂಸ್ಕೃತಿ. ಶ್ರೀ ರಂಭಾಪುರಿ ಜಗದ್ಗುರುಗಳಲ್ಲಿ ವೈರಾಗ್ಯವೂ ಇದೆ ವೈಭವವೂ ಇದೆ ಎಂದರು.

ಮಲ್ಲಿಕಾರ್ಜುನ ಗುಂಗೆ ಮಾತನಾಡಿ ಶ್ರೀ ರಂಭಾಪುರಿ ವೀರಗಂಗಾಧರ ಜಗದ್ಗುರುಗಳು ಸಾರಿದ ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಸಾರಿದ್ದಾರೆ. ದೇಶದಲ್ಲಿ ಅನೇಕ ಧರ್ಮಗಳಿದ್ದರೂ ಮಾನವ ಕಲ್ಯಾಣವೇ ಎಲ್ಲ ಧರ್ಮಗಳ ಗುರಿಯಾಗಿದೆ ಎಂದರು.

ಹಾರಕೂಡ ಮಠದಿಂದ ಗೌರವ: ಇದೇ ಸಂದರ್ಭದಲ್ಲಿ ಹಾರಕೂಡ ಹಿರೇಮಠದ ಡಾ. ಚನ್ನವೀರ ಶಿವಾಚಾರ್ಯ ಸ್ವಾಮಿಗಳು ದಸರೆಯ ಸಂದರ್ಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳಿಗೆ ವಿಶೇಷ ಗೌರವ ಸಲ್ಲಿಸಿದರು.

# ಸ್ತ್ರೀ ಸ್ವಾತಂತ್ರ್ಯಕ್ಕೆ ಮನೆ ಬಿಟ್ಟ ಮಹಾನುಭಾವ ಬಸವಣ್ಣ




ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 30 : ಬಸವಣ್ಣ ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಮನೆ ಬಿಟ್ಟ ಮಹಾನುಭಾವರು ಎಂದು ನಿವೃತ್ತ ಬ್ಯಾಂಕ್ ಅಧಿಕಾರಿ ಚಂದ್ರಕಾಂತ ಪಟ್ನೆ ಹೇಳಿದರು.

ನಗರದ ಬಸವಗಿರಿಯಲ್ಲಿ ಮರಣವೇ ಮಹಾನವಮಿ ಹಾಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವ ನಿಮಿತ್ತ ಸೋಮವಾರ ನಡೆದ 'ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ತ್ರೀಯರಿಗಿಲ್ಲದ ಧರ್ಮ ಸಂಸ್ಕಾರ ತನಗೂ ಬೇಡವೆಂದು ಬಸವಣ್ಣನವರು ಸ್ತ್ರೀ ಸಮಾನತೆ ಎತ್ತಿ ಹಿಡಿದಿದ್ದರು ಎಂದು ತಿಳಿಸಿದರು.

ಬಸವ ಪೂರ್ವದಲ್ಲಿ ಮಹಿಳೆಯರ ಸ್ಥಿತಿ ಶೋಚನೀಯವಾಗಿತ್ತು. ಸ್ತ್ರೀ ಪೂಜೆಗೆ ಅರ್ಹ. ಆದರೆ, ಸ್ವಾತಂತ್ರ್ಯಕ್ಕೆ ಅನರ್ಹಳೆಂದು ಶೂದ್ರ ವರ್ಗಕ್ಕೆ ಸೇರಿಸಲ್ಪಟ್ಟಿದ್ದಳು. ಆಕೆಗೆ ಬದುಕುವ ಸ್ವಾತಂತ್ರ್ಯವೂ ಇರಲಿಲ್ಲ. ತ್ರೇತಾಯುಗದಲ್ಲಿ ಆಕೆ ಅಪಹರಿಸಲ್ಪಟ್ಟು, ಕಾಡಿಗೆ ಅಟ್ಟಲ್ಪಟ್ಟಳು. ದ್ವಾಪರದಲ್ಲಿ ಜೂಜಿಗಿಡಲ್ಪಟ್ಟು, ತುಂಬಿದ ಸಭೆಯಲ್ಲಿ ವಸ್ತ್ರ ಅಪಹರಿಸಲ್ಪಟ್ಟಳು ಎಂದು ಹೇಳಿದರು.

ಬಸವಯುಗ ಆರಂಭವಾಗುತ್ತಲೇ ಸ್ತ್ರೀ ಮೈಕೊಡವಿ ಎದ್ದು ನಿಂತಳು. ಅಕ್ಕಮಹಾದೇವಿ ರಾಜನಿಗೆ ಮೂರು ಕರಾರುಗಳನ್ನು ವಿಧಿಸುವ ಮಟ್ಟಿಗೆ ಬೆಳೆದರೆ, ಮುಕ್ತಾಯಕ್ಕ ಅಲ್ಲಮರೊಂದಿಗೆ ಸಂವಾದ ಮಾಡಿದಳು ಎಂದು ತಿಳಿಸಿದರು.

ಮೋಳಿಗೆ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮರು ತಮ್ಮ ತಮ್ಮ ಪತಿಗೆ ಮಾರ್ಗದರ್ಶನ ಮಾಡಿ, ಪತಿಯಿಂದಲೇ ಗುರುವೆಂದು ಗೌರವಿಸಲ್ಪಟ್ಟರು. ಆಧ್ಯಾತ್ಮ ಸಾಧನೆಯಲ್ಲೂ 12ನೇ ಶತಮಾನದಲ್ಲಿ ಮಹಿಳೆಯರು ಹಿಂದೆ ಬೀಳಲಿಲ್ಲ. ಬಸವ ಕೃಪೆಯಿಂದ ಅಕ್ಷರ ಕಲಿತು ವಚನಗಳನ್ನು ಬರೆದರು. ಬಸವಣ್ಣನವರು ಪ್ರವಾಹದ ವಿರುದ್ಧ ಈಜಲಿಲ್ಲ. ನದಿಯ ದಿಕ್ಕನ್ನೇ ಬದಲಿಸಿದರು ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಲಿಂಗಾಯತ ಮಹಾ ಮಠದ ಪ್ರಭುದೇವ ಸ್ವಾಮೀಜಿ ಮಾತನಾಡಿ, ಮೊಲೆ ಮೂಡಿ ಬಂದಡೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು, ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ, ಗಂಡೂ ಅಲ್ಲ ಎಂದು ಸಮಾನತೆಯ ಪರಾಕಾಷ್ಠೆ ಮೆರೆದವರು ಶರಣರು ಎಂದು ನುಡಿದರು.

ಶರಣ ಸತಿ ಲಿಂಗ ಪತಿ ಭಾವ ಶರಣರದು. ಲೋಕವನ್ನಾಳುವ ಪರಮಾತ್ಮನೊಬ್ಬನೆ ಜಗದ ಗಂಡಸೆಂಬುದು ಅವರ ಅಭಿಮತ. ಬಟ್ಟಾಗಿ ಹುಟ್ಟಿದ ನಮಗೆ ಬೆಟ್ಟವಾಗಿ ರೂಪಿಸಿದ ಮಹಾ ತಾಯಿ ಸ್ತ್ರೀಗೆ ಶೂದ್ರಳೆಂದು ಜರಿಯುವುದು ಸರಿಯಲ್ಲ ಎಂದು ಹೇಳಿದರು.

ಇಷ್ಟಲಿಂಗ ಜನಕ ಬಸವಣ್ಣನವರು ಪ್ರಪ್ರಥಮವಾಗಿ ಇಷ್ಟಲಿಂಗ ದೀಕ್ಷೆ ನೀಡಿದ್ದು ಅಕ್ಕನಾಗಮ್ಮ ತಾಯಿಗೆ. ಅದಕ್ಕಾಗಿಯೇ ಬಸವಣ್ಣನವರನ್ನು ಮಾತೃಹೃದಯಿ ಎನ್ನುತ್ತಾರೆ. ತಾಯಿಯಂತೆ ಭೇದವಿಲ್ಲದಂತೆ ಸರ್ವರಿಗೂ ಮೇಲೆತ್ತಿದರು. ಶರಣರ ತತ್ವ ಅಪ್ಪಿಕೊಂಡ ಅಕ್ಕ ಅನ್ನಪೂರ್ಣ ತಾಯಿಯವರು ಸಹ ಭೇದ ಮಾಡದೆ ಎಲ್ಲರನ್ನು ಮಕ್ಕಳಂತೆ ಕಂಡರು ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಹುಮನಾಬಾ???ನ ಬಸವ ಸೇವಾ ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ. ಎಸ್.ಆರ್. ಹಿರೇಮಠ ಮಾತನಾಡಿ, ನಮ್ಮನ್ನೆಲ್ಲ ಬಸವ ಬೆಳಕಿನೆಡೆಗೆ ತಂದವರು ಅಕ್ಕ ಅನ್ನಪೂರ್ಣ ತಾಯಿ. ನಮ್ಮ ಬದುಕು ಅವರಿಂದ ಹಸನಾಯಿತು. ಬಸವ ಮಾರ್ಗ ಅತ್ಯಂತ ಸರಳ, ಆ ಮಾರ್ಗ ನಮಗೆ ಸಿಕ್ಕಿದ್ದು ನಮ್ಮ ಪುಣ್ಯ. ಮಹಿಳೆಯರಿಗೆ ದೈವತ್ವ ಕೊಟ್ಟವರು ಬಸವಣ್ಣ. ಅದಕ್ಕೆ ಉದಾಹರಣೆ ಅಕ್ಕ ಎಂದು ತಿಳಿಸಿದರು.

ಇಚ್ಛಾ ನಿವೃತ್ತಿ ಹೊಂದಿದ ನ್ಯಾಯವಾದಿ ಅಶೋಕ ಮಹಾಲಿಂಗ ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ಎಇಇ ಸೂರ್ಯಕಾಂತ ಬಿರಾದಾರ, ಬಸವಾನುಯಾಯಿ ಮಡಿವಾಳಯ್ಯ ಸ್ವಾಮಿ, ಹುಮನಾಬಾದ್ ಬಸವ ಸೇವಾ ಪ್ರತಿಷ್ಠಾನದ ಕಾರ್ಯದರ್ಶಿ ಮಲ್ಲಿಕಾರ್ಜುನ ಸಂಗಮಕರ್, ನೀಲಮ್ಮನ ಬಳಗದ ಸಂಗೀತಾ ಗಣಾಚಾರಿ, ರೂಪಾ ಮಲ್ಲಿಕಾರ್ಜುನ ಹಂಡೆ, ಸಾಹಿತಿ ರಮೇಶ ಮಠಪತಿ ಇದ್ದರು. ಉಷಾ ಬೆಳಕೋಟೆ ವಚನ ಪಠಣ ಮಾಡಿದರು. ಸಂತೋಷ ಹಂಗರಗಿ ನಿರೂಪಿಸಿದರು. ಲಕ್ಷ್ಮಿ ಪ್ರವೀಣ್ ಬಿರಾದಾರ ಸ್ವಾಗತಿಸಿದರು. ರಮೇಶ ಬೆಳಕೋಟೆ ಭಕ್ತಿ ದಾಸೋಹಗೈದರು.

## ಒಂದನೇ ಪುಟದಿಂದ

# ಹೆಚ್ಚುವರಿ ಪರಿಹಾರ:ಸಿದ್ದರಾಮಯ್ಯ


ಮನೆಗೆ ನೀರು ನುಗ್ಗಿ ಆಹಾರ ಧಾನ್ಯ, ಗೃಹಪಯೋಗಿ ವಸ್ತುಗಳ ಹಾನಿಗೆ ಇದುವರೆಗೆ 2.50 ಕೋಟಿ ರೂ. ಪರಿಹಾರ ನೀಡಲಾಗಿದೆ. ಜಂಟಿ ಸಮೀಕ್ಷೆ ನಡೆಯುತ್ತಿದ್ದು, ಪರಿಹಾರ ವಿತರಣೆ ಕಾರ್ಯ ನಿರಂತರವಾಗಿರಲಿದೆ ಎಂದರು.117 ಗ್ರಾಮಕ್ಕೆ ತೊಂದರೆ, 80 ಕಾಳಜಿ ಕೇಂದ್ರ ಸ್ಥಾಪನೆ:

ತೀವ್ರ ಅತಿವೃಷ್ಠಿಗೆ ಒಳಗಾದ ಕಲಬುರಗಿ, ವಿಜಯಪುರ, ಯಾದಗಿರಿ ಜಿಲ್ಲೆಯಲ್ಲಿ ಭೀಮಾ ನದಿ ಪ್ರವಾಹದಿಂದ 117 ಗ್ರಾಮಗಳು ತೊಂದರೆಗೀಡಾಗಿದ್ದು, ಕಲಬುರಗಿ–56, ವಿಜಯಪುರ–17 ಹಾಗೂ ಯಾದಗಿರಿಯಲ್ಲಿ 7 ಸೇರಿದಂತೆ ಒಟ್ಟಾರೆ 80 ಕಾಳಜಿ ಕೇಂದ್ರ ತೆರೆದು 10,576 ಜನ ಸಂತ್ರಸ್ತರಿಗೆ ಊಟೋಪಚಾರದ ಜೊತೆಗೆ ಅಗತ್ಯ ಮೂಲಸೌಕರ್ಯ ಒದಗಿಸಲಾಗಿದೆ ಎಂದು ಸಿ.ಎಂ. ಸಿದ್ದರಾಮಯ್ಯ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್, ಐ.ಟಿ–ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ ಪಾಟೀಲ್, ವೈದ್ಯಕೀಯ ಶಿಕ್ಷಣ, ಕೌಶಾಲಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ್, ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪೂರ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್, ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ಡಾ. ಅಜಯಸಿಂಗ್, ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ್ ಪರಿಷತ್ ಶಾಸಕರಾದ ತಿಪ್ಪಣ್ಣಪ್ಪ ಕಮಕನೂರ, ಚಂದ್ರಶೇಖರ ಪಾಟೀಲ, ಜಗದೇವ ಗುತ್ತೇದಾರ, ಇಂಧನ ಇಲಾಖೆಯ ಹೆಚ್ಚುವರಿ ಅಪರ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ, ಕೆ.ಪಿ.ಟಿ.ಸಿ.ಎಲ್. ವ್ಯವಸ್ಥಾಪಕ ನಿರ್ದೇಶಕರು ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪಂಕಜ್ ಕುಮಾರ ಪಾಂಡೆ, ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಇದ್ದರು.







ನಾಡಿನ ಸಮಸ್ತ ಜನತೆಗೆ

ಹುಮನಾಬಾದ ಪುರಸಭೆ ವತಿಯಿಂದ

ನಾಡಹಬ್ಬ ದಸರಾ ಹಾಗೂ
ಆಯುಧ ಪೂಜೆ ಹಾಗೂ
ಗಾಂಧೀ ಜಯಂತಿಯ
ಹಾರ್ದಿಕ ಶುಭಾಶಯಗಳು

ಶ್ರೀಮತಿ ಪಾರ್ವತಿ ಶೇರಿಕಾರ,
ಅಧ್ಯಕ್ಷರು,
ಪುರಸಭೆ,ಹುಮನಾಬಾದ.

ಶ್ರೀಮತಿ ವನಿತಾಬಾಯಿ
ಮುಖ್ಯಾಧಿಕಾರಿಗಳು
ಪುರಸಭೆ,ಹುಮನಾಬಾದ.



ಶ್ರೀ ಮುಕ್ರಮ್ ಜಾ,
ಉಪಾಧ್ಯಕ್ಷರು
ಪುರಸಭೆ,ಹುಮನಾಬಾದ.



स्वच्छ भारत
एक कदम स्वच्छता की ओर

ಹುಮನಾಬಾದ ನಗರ ಸ್ವಚ್ಛತೆಯೇ ಪುರಸಭೆಯ ಪ್ರಥಮ ಆದ್ಯತೆ.
ಸ್ವಚ್ಛತೆಯಿದ್ದರೇ ರೋಗಗಳು ದೂರ.
ಸುಂದರ, ಸ್ವಚ್ಛ ಹುಮನಾಬಾದ ನಗರವೇ ಪುರಸಭೆಯ ಆದ್ಯತೆ

# ಇಂದು ಸಂಗಮೇಶ ಎನ್ ಜವಾದಿ ರಚಿಸಿದ 'ವೈಚಾರಿಕ ಚಿಂತನೆ' ಕೃತಿ ಲೋಕಾರ್ಪಣೆ

**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ: – ಸೆ 30 ಪರಿಸರ ಸಂರಕ್ಷಕ,ಸಾಹಿತಿ,ಲೇಖಕ,ಪತ್ರಕರ್ತ, ಬಸವ ತತ್ವ ಪ್ರಚಾರಕ ಶರಣ ಸಂಗಮೇಶ ಎನ್ ಜವಾದಿ ರಚಿಸಿದ "ವೈಚಾರಿಕ ಚಿಂತಕರು" ಕೃತಿಯನ್ನು ಬಸವಾದಿ ಶರಣರ ಪವಿತ್ರ ಭೂಮಿ ಬಸವಕಲ್ಯಾಣದ ಹರಳಯ್ಯ ಗವಿಯ ಆವರಣದಲ್ಲಿ ಜರುಗುತ್ತಿರುವ ಶರಣ ವಿಜಯೋತ್ಸವ ನಾಡ ಹಬ್ಬ ಕಾರ್ಯಕ್ರಮದಲ್ಲಿ ಇಂದು ಬುಧವಾರ ಮುಂಜಾನೆ 11 ಗಂಟೆಗೆ ನಡೆಯುವ ಹುತಾತ್ಮ ದಿನಾಚರಣೆ ಪ್ರದಾನ ಸಮಾರಂಭದಲ್ಲಿ ಲೋಕಾರ್ಪಣೆ ಆಗಲಿದೆ.



ಕಲ್ಯಾಣ ಮಾಹಾಮನೆ ಮಾಹಾಮಠ ಗುಣತೀರ್ಥವಾಡಿ ಪೂಜ್ಯ ಶ್ರೀ ಬಸವಪ್ರಭು ಸ್ವಾಮಿಜಿ. ಶ್ರೀ ಬಸವೇಶ್ವರ ಸೇವಾ ಟ್ರಸ್ಟ್ ಮುಖ್ಯಸ್ಥೆ ಶರಣೆ ಇಂದುಮತಿ ಗಾರಂಪಳ್ಳಿ ಮಾತಾಜಿ. ಹಿರಿಯ ಸಾಹಿತಿ ಸೋಮನಾಥ ಯಾಳವಾರರವರು ಕೃತಿ ಲೋಕಾರ್ಪಣೆ ಮಾಡುವರು. ದಿವ್ಯ ನೇತೃತ್ವ ಹರಳಯ್ಯ ಗವಿಯ ಪೂಜ್ಯಶ್ರೀ ಡಾ. ಗಂಗಾಂಬಿಕಾ ಅಕ್ಕ ವಹಿಸುವರು. ನಾಗಯ್ಯಾ ಸ್ವಾಮಿ, ವೈಜನಾಥ ಕಾಮಶೆಟ್ಟಿ , ಶಂಕ್ರಪ್ಪ ಪಾಟೀಲ, ಜಗನ್ನಾಥ ರಾಚೋಟಿ, ದತ್ತಾತ್ರೇಯ ಬಾಂದೇಕರ್ ಸೇರಿದಂತೆ ಅನೇಕರು ಪಾಲ್ಗೊಳ್ಳುವರು. ಅಧ್ಯಕ್ಷತೆಯನ್ನು ಶಿವರಾಜ್ ಶಾಶೆಟ್ಟಿ ಕೋಶಾಧ್ಯಕ್ಷರು ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿ ರವರು ವಹಿಸುವರು.ಸಮಾಜದ ಅನೇಕ ವಿಷಯನ್ನೊಳಗೊಂಡ ಆಯ್ದ ಲೇಖನಗಳ ಗೊಚ್ಚವೇ ಈ ಕೃತಿಯಾಗಿದೆ. ಕೃತಿಯಲ್ಲಿ ಸಮಾಜ ಮುಖಿ ಚಿಂತನೆ, ಕಲ್ಯಾಣ ಕ್ಷೇತ್ರ, ರೈತರ ಸಮಸ್ಯೆ ಮತ್ತು ಪರಿಹಾರ, ವೈಚಾರಿಕ ಚಿಂತಕರ ಹಾಗೂ ಸಾಹಿತಿಗಳ ಕಿರು ಪರಿಚಯ ಭಾವದಿಂದ ಕೂಡಿದ ಕೃತಿ ಇದಾಗಿದ್ದು. ಎಲ್ಲರೂ ಕೃತಿಯನ್ನು ಕೊಂಡು ಓದಲೇಬೇಕಾದ ಉತ್ತಮ ಕೃತಿ ಇದಾಗಿದೆ ಎಂದರು. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯಶಸ್ವಿಯಾಗಿ ಜರುಗಿದ ಇಟಗಾ ಗ್ರಾಮ ಸಭೆ

# ವಲಸೆ ಹೋಗದೆ ಉದ್ಯೋಗ ಖಾತರಿ ಯೋಜನೆ ಲಾಭ ಪಡೆಯಿರಿ: ರಾಹುಲ್ ಕೈವಾರೆ

**ಮಲ್ಲಮ್ಮ ನುಡಿ ವಾರ್ತೆ**



ಚಿಟಗುಪ್ಪ:– ಗ್ರಾಮೀಣ ಭಾಗದ ಕೂಲಿ ಕಾರ್ಮಿಕರು ವಲಸೆ ಹೋಗದೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಲಾಭ ಪಡೆಯಬೇಕು. ಯೋಜನೆಯಡಿ ವೈಯಕ್ತಿಕ ಹಾಗೂ ಸಮುದಾಯ ಕಾಮಗಾರಿಗಳನ್ನು ಕೈಗೊಳ್ಳಬಹುದು. ಎರೆಹುಳು ತೊಟ್ಟಿ, ದನದ ಕೊಟ್ಟಿಗೆ, ಕೋಳಿ ಶೆಡ್, ಕೆರೆ ಹೂಳೆತ್ತುವಿಕೆ, ಕ್ಷೇತ್ರಬದು ನಿರ್ಮಾಣ ಮಾಡಬಹುದಾಗಿದೆ ಎಂದು ಸಾಮಾಜಿಕ ಲೆಕ್ಕಪರಿಶೋಧನೆ ಕಾರ್ಯಕ್ರಮದ ತಾಲೂಕ ವ್ಯವಸ್ಥಾಪಕ ರಾಹುಲ್ ಕೈವಾರೆ ತಿಳಿಸಿದರು. ತಾಲೂಕಿನ ಇಟಗಾ ಗ್ರಾಮ ಪಂಚಾಯತ್ ಆವರಣದಲ್ಲಿ ಮಂಗಳವಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 15ನೇ ಹಣಕಾಸು ಆಯೋಗದ ಅನುದಾನ ಮತ್ತು 2020–21ನೇ ಸಾಲಿನಿಂದ 2024–25ನೇ ಸಾಲಿನ ವರೆಗೆ ಜಿಲ್ಲಾ ಮತ್ತು ತಾಲೂಕು ಪಂಚಾಯತನ ರಾಜ್ಯ ಹಣಕಾಸು ಆಯೋಗದ ಅನುದಾನದಡಿ ಅನುಷ್ಟಾನ ಮಾಡಿರುವ ಕಾಮಗಾರಿಗಳ/ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಸಾಮಾಜಿಕ ಪರಿಶೋಧನೆ ಪ್ರಕ್ರಿಯೆಯಲ್ಲಿ ಕಂಡು ಬಂದಿರುವ ಅಂಶಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷೆ ತೆಂಗೆಮ್ಮ, ಸಾಮಾಜಿಕ ಲೆಕ್ಕಪರಿಶೋಧನೆಯ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ದೇವಿದಾಸ, ನೋಡಲ್ ಅಧಿಕಾರಿ ಅರುಣಾ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆಕಾಶ ಕುಂಬಾರ್, ಅರಣ್ಯಧಿಕಾರಿ ರೌಫಖಾನ, ತಾಂತ್ರಿಕ ಸಹಾಯಕ ನಾಗರಾಜ, ಮಹೇಬೂಬ್, ಐಇಸಿ ಸಯೋಜಕರು ವಿಶ್ವನಾಥ ಗಡ್ಡಿಮನಿ, ಗೋಪಾಲ್ ಫುಲೇ, ತುಕಾರಾಮ, ಗೋಪಾಲ್ ಇಟಗಾ, ಸೇರಿದಂತೆ ಗ್ರಾಮ ಪಂಚಾಯತ್ ಸದಸ್ಯರು, ಸಿಬ್ಬಂದಿ ವರ್ಗದವರು, ಗ್ರಾಮಸ್ಥರು, ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.


**: C I T A T I O N :**

**IN THE COURT OF THE PRL. CIVIL JUDGE AND JMFC AT HUMNABAD**
**CRL. MISC. NO. 1035/2025**

Petitioner:
1. Tukaram S/o Ramanna Age; 57 years Occu: Agril
2. Vithal S/o Ramanan Age; 55 years Occu: Agril
3. Shrimanth S/o Ramanna, Age; 53 years Occu: Agril
4. Surekanth S/o Ramanna, Age; 50 years Occu: Agril
5. Shardabai W/o Bhimanna D/o Ramanna Age; 53 years Occu: Agril
6. Lalitha W/o Ashoka S/o Ramanna Age; 51 years Occu: Agril
7. Sharnamma W/o Ramanna Age; 70 years Occu: House Hold

All R/o Molkera Tq:Humnabad

Vs//

Respondent:
The Registrar of Birth and Death through the Tahasildar Humnabad.
Sub:- Petition U/Sec. 13(3) of Birth and Death Registration Act-1969.

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner no. 1 to 6 and husband of petitioner no. 7 by namely : late RAMANNA S/O RUDRAPPA, who was died on 08.09.2021 at village Molkera Tq:Humnabad Dist:Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this court of 24.10.2025 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 20-09-2025.

//By order of the court//
Chief Ministerial Officer,
Prl. Civil Judge & JMFC Court,
Humnabad


# ಜಲಾವೃತ್ತ ನಾಯ್ಕಲ್ ಗ್ರಾಮದ ಮನೆಗಳಿಗೆ ಜಮಾದಾರ ಭೇಟಿ: ಸಾಂತ್ವನ, ಭರವಸೆ

**ಮಲ್ಲಮ್ಮ ನುಡಿ ವಾರ್ತೆ**



ಯಾದಗಿರಿ:ನಿರಂತರ ಮಳೆಯಿಂದಾಗಿ ಅಪಾರ ಹಾನಿ ಉಂಟಾಗಿರುವ ವಡಗೇರಿ ತಾಲ್ಲೂಕಿನ ನಾಯ್ಕಲ್ ಗ್ರಾಮದ ಜಲಾವೃತ್ತ ಪ್ರದೇಶಗಳಿಗೆ ಕೆಪಿಸಿಸಿ ರಾಜ್ಯ ಸಂಯೋಜಕ ಮತ್ತು ಕಿಸಾನ್ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಮೈನುದ್ದಿನ್ ಎಂ. ಜಮಾದಾರ ದೋರನಳ್ಳಿ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಅಪಾರ ಮಳೆಯಿಂದಾಗಿ ಭೀಮಾನದಿ ನೀರು ಹೊಲ ಗದ್ದೆಗಳಿಗೆ ಅಲ್ಲದೇ ಮನೆಗಳಿಗೆ ನುಗ್ಗಿದ್ದು, ಅಪಾರ ನಷ್ಟವಾಗಿದೆ, ಸತತ ಮಳೆಯ ಕಾರಣ ವಡಗೇರಿ ತಾಲ್ಲೂಕಿನಲ್ಲಿ ಹೆಚ್ಚು ಹಾನಿಯಾಗಿದ್ದು, ಅದರಲ್ಲೂ ನಾಯ್ಕಲ್ ಗ್ರಾಮದಲ್ಲಿ ಬೆಳೆ ಹಾನಿ ಜೊತೆಗೆ ಮನೆಯಲ್ಲಿ ನೀರು ನುಗ್ಗಿ ಅಪಾರ ಹಾನಿಯಾಗಿದೆ ಎಂದು ಅವರು ಹೇಳಿದರು. ಸರ್ಕಾರ ಹಾಗೂ ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆ ಮಾಡುತ್ತಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪೂರ ಹಾಗೂ ಶಾಸಕರಾದ ಚೆನ್ನಾರಡ್ಡಿ ಪಾಟೀಲ್ ತುನ್ನೂರ, ರಾಜಾ ವೇಣುಗೋಪಾಲ ನಾಯಕರು ಸಹ ಸ್ಥಳಗಳಿಗೆ ಭೇಟಿ ಕೊಟ್ಟು ವಿವರ ಸಂಗ್ರಹಿಸಿ ಸರ್ಕಾರಕ್ಕೆ ಮಾಹಿತಿ ನೀಡಿದ್ದಾರೆ.

ಶೀಘ್ರ ಸಂತ್ರಸ್ತರಿಗೆ ಪರಿಹಾರ ಕಾರ್ಯ ನಡೆಯಲಿದೆ ಎಂದು ಹೇಳಿದರು.

# ಭಾರತೀಯ ಸಂಸ್ಕೃತಿಗೆ ಮಹಿಳೆಯರ ಕೊಡುಗೆ ಅಪಾರ ಶ್ರೀ ರಂಭಾಪುರಿ ಜಗದ್ಗುರುಗಳು

**ಮಲ್ಲಮ್ಮ ನುಡಿ ವಾರ್ತೆ**



ಬಸವಕಲ್ಯಾಣ–ಸಪ್ಟಂಬರ್–30– ಬದುಕಿನ ಉನ್ನತಿಗೆ ಉತ್ತಮ ಸಂಸ್ಕಾರ ಮತ್ತು ಸಂಸ್ಕೃತಿ ಅಡಿಪಾಯ. ಭೌತಿಕ ಬದುಕಿಗೆ ಸಂಪತ್ತಷ್ಟೇ ಮುಖ್ಯವಲ್ಲ. ಅದರೊಂದಿಗೆ ಧರ್ಮಪ್ರಜ್ಞೆ ಮತ್ತು ಸದಾಚಾರ ಬೆಳೆದು ಬರಬೇಕಾಗಿದೆ. ಧರ್ಮ ಸಂಸ್ಕೃತಿ ಮತ್ತು ಪರಂಪರೆ ಆದರ್ಶಗಳು ಮಹಿಳೆಯರಿಂದ ಬೆಳೆದು ಬಂದಿವೆ. ಉತ್ಕೃಷ್ಟ ಭಾರತೀಯ ಸಂಸ್ಕೃತಿಯ ಸಂವರ್ಧನೆಗೆ ಮಹಿಳೆಯರ ಕೊಡುಗೆ ಅಪಾರ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಸೋಮವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 8ನೇ ದಿನದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡುತ್ತಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಮನುಷ್ಯನ ಭಾವನೆಗಳು ಬೆಳೆಯುತ್ತಿಲ್ಲ. ಜ್ಞಾನ ಕ್ರಿಯಾತ್ಮಕವಾದ ಧರ್ಮ ಪರಿಪಾಲನೆಯಿಂದ ಜಗದಲ್ಲಿ ಶಾಂತಿ ನೆಲೆಸಲು ಸಾಧ್ಯ. ಸತ್ಯ ಮತ್ತು ಶಾಂತಿ ಧರ್ಮದ ಎರಡು ಕಣ್ಣು. ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಅವಶ್ಯಕವಾಗಿವೆ. ಮನುಷ್ಯನ ಮನಸ್ಸು ಬುದ್ಧಿ ಮತ್ತು ಸದ್ವಿಚಾರಗಳು ಹುಲುಸಾಗಿ ಬೆಳೆದಾಗ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ. ಅನುಭವದಿಂದ ಸಿಗುವ ಜ್ಞಾನ ಓದಿನಿಂದ ಸಿಗುವುದಿಲ್ಲ. ಒರೆಗಲ್ಲಿಗೆ ಹಚ್ಚಿ ತಿಕ್ಕಿದಾಗ ಶ್ರೀಗಂಧ ಹೊರ ಹೊಮ್ಮುವಂತೆ ಸಂಕಷ್ಟಗಳನ್ನು ಎದುರಿಸಿದ ಮನುಷ್ಯ ಜೀವನದಲ್ಲಿ ಉನ್ನತಿ ಹೊಂದಲು ಸಾಧ್ಯ. ಗಾಡಾಂಧಕಾರದಲ್ಲಿ ಮುಳುಗಿದ ಮಾನವರನ್ನು ಎಚ್ಚರಿಸಿ ಜಾಗೃತಿ ಉಂಟು ಮಾಡುವುದು ಗುರುವಿನ ಆದ್ಯ ಕರ್ತವ್ಯವಾಗಿದೆ. ಹುಟ್ಟು ಸಾವು ನಮ್ಮ ಕೈಯಲ್ಲಿ ಇಲ್ಲ. ಆದರೆ ಬದುಕು ಮಾತ್ರ ನಮ್ಮ ಕೈಯಲ್ಲಿದೆ. ಭೌತಿಕ ಸಂಪತ್ತಿಗಾಗಿ ಎಲ್ಲರ ಹೋರಾಟ ನಿರಂತರ ಇರುತ್ತದೆ. ಭೌತಿಕ ಸಂಪತ್ತು ಶಾಶ್ವತವಲ್ಲ. ಆಧ್ಯಾತ್ಮ ಜ್ಞಾನ ಸಂಪತ್ತು ಶಾಶ್ವತವಾದುದು. ವೀರಶೈವ ಧರ್ಮದಲ್ಲಿ ಮಹಿಳೆಯರಿಗೆ ಮೊದಲ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಉತ್ತಮ ಸಂಸ್ಕೃತಿಯ ಸಂವರ್ಧನೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರು ಮಹಿಳೆಯರಿಗೆ ಕೊಟ್ಟ ಸಂದೇಶ ಅವಶ್ಯವಾದುದು. ಮಲಿನಗೊಂಡ ಮನಸ್ಸಿಗೆ ಸುಜ್ಞಾನದ ಬೀಜ ಬಿತ್ತಿ ಮಾಧುರ್ಯದ ಫಲಗಳನ್ನು ಪಡೆದುಕೊಳ್ಳಬೇಕು ಎಂದರು.

ಬೆಂಗಳೂರು ಎಸ್.ಜೆ.ಆರ್.ಮಹಿಳಾ ವಿದ್ಯಾಲಯದ ಪ್ರಾಂಶುಪಾಲರಾದ ಡಾ॥ ಪ್ರೇಮಾ ಸಿದ್ಧರಾಜು ಮಾತನಾಡಿ ವಿದ್ಯೆ ವಿವೇಚನೆ ಚಿಂತನೆ ಆತ್ಮ ವಿಶ್ಲೇಷಣೆ ಮತ್ತು ಸತ್ಯ ಶುದ್ಧ ಧ್ಯೇಯಗಳು ಜೀವನ ಶ್ರೇಯಸಿಗೆ ಮೆಟ್ಟಿಲುಗಳು. ಭವ್ಯ ಕಟ್ಟಡ ಸೌಧಗಳನ್ನು ಎತ್ತರಕ್ಕೆ ಕಟ್ಟಿದರಷ್ಟೇ ಸಾಲದು. ಅದರ ಜೊತೆಗೆ ಮಾನವೀಯತೆಯ ಆದರ್ಶಗಳನ್ನು ಬೆಳೆಸಿದ ಕೀರ್ತಿ ಮಹಿಳೆಯರಿಗೆ ಸಲ್ಲುತ್ತದೆ. ಸುಸಂಸ್ಕೃತ ಮಹಿಳೆಯಿಂದ ನಾಡಿನ ಸಂಸ್ಕೃತಿ ಸಭ್ಯತೆ ಬೆಳೆದು ಬರಲು ಸಾಧ್ಯವಾಗುತ್ತದೆ. ವೀರಶೈವ ಧರ್ಮದಲ್ಲಿ ಮಹಿಳೆಯರಿಗೆ ಪುರುಷರಷ್ಟೇ ಸಮಾನ ಅವಕಾಶ ಕಲ್ಪಿಸಿ ಕೊಟ್ಟಿದೆ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಹಸಿರು ಬಳೆ, ಕುಂಕುಮ, ಕರಿಮಣಿ ಸರ, ಮೂಗುನತ್ತು, ಕಾಲುಂಗರ ಮತ್ತು ಮಾಂಗಲ್ಯ ಕರುಣಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದು. ಭಾರತೀಯ ಉತ್ಕೃಷ್ಟ ಸಂಸ್ಕೃತಿ ಬೆಳೆದು ಬಲಗೊಳ್ಳಲು ಮಹಿಳೆಯರು ನೀಡಿದ ಕೊಡುಗೆಯನ್ನು ಎಂದಿಗೂ ಮರೆಯುವಂತಿಲ್ಲ ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಡಾ.ಮಹೇಶ್ ಪಾಟೀಲ ಕಲಬುರ್ಗಿ ಮಾತನಾಡಿ ನದಿ ಸಮುದ್ರಗಳನ್ನು ಸೇತುವೆ ಮೂಲಕ ಗುಡ್ಡ ಬೆಟ್ಟಗಳನ್ನು ಸುರಂಗ ಮಾರ್ಗ ನಿರ್ಮಿಸಿ ದಾಟಬಹುದು. ಆದರೆ ಮನದ ಮಧ್ಯೆ ನಿರ್ಮಾಣಗೊಂಡ ಸ್ವಾರ್ಥದ ಗೋಡೆಗಳನ್ನು ದಾಟುವುದು ಬಲು ಕಷ್ಟ. ನಾವೆಲ್ಲರೂ ಹಿಂದೂ ವೀರಶೈವ ಧರ್ಮದವರು ಎಂಬ ಭಾವನೆ ಮೂಡಬೇಕು. ಶ್ರೀ ರಂಭಾಪುರಿ ಜಗದ್ಗುರುಗಳವರ ಆದೇಶವನ್ನು ನಾವೆಲ್ಲರೂ ಪಾಲಿಸೋಣ. ಯುವಕರು ದುಶ್ಚಟಗಳಿಗೆ ಬಲಿಯಾಗದೇ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕೆಂದರು. ಶ್ರೀ ರಂಭಾಪುರಿ ಜಗದ್ಗುರುಗಳವರ ಧರ್ಮ ಸಮ್ಮೇಳನ ಸಂಸ್ಕೃತಿಯ ಪುನರುತ್ಥಾನಕ್ಕಾಗಿ ಸಾಕ್ಷಿಯಾಗಿದೆ ಎಂದು ಹರುಷ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ ಮೆಹಕರ–ತಡೋಳಾ ಹಿರೇಮಠದ ರಾಜೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಮಾನವ ಜೀವನದ ಮೌಲ್ಯಗಳು ಶಾಶ್ವತವಾಗಿವೆ. ಜೀವನ ಮೌಲ್ಯಗಳು ಅಂತ್ಯಗೊಂಡರೆ ಅದರೊಂದಿಗೆ ಮಾನವೀಯತೆ ಅಂತ್ಯ ಆಗುತ್ತದೆ ಎಂದರು. ಪ್ರಾಸ್ತಾವಿಕ ಮಾತನಾಡಿದ ಪಾಳಾ ಹಿರೇಮಠದ ಡಾ॥ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು ದೇಹದ ಸಂರಕ್ಷಣೆಗಾಗಿ ಜೀವನ ಸತ್ವಗಳ ಅವಶ್ಯಕತೆ ಇರುವಂತೆ ಮಹಾನುಭಾವರ ಚಿಂತನೆಗಳು ಬದುಕಿ ಬಾಳುವ ಜನಾಂಗಕ್ಕೆ ಆಶಾಕಿರಣವಾಗಿವೆ. ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನ ಭಾರತೀಯ ಸಂಸ್ಕೃತಿಯ ಬೆಳವಣಿಗೆಗೆ ಬಹು ದೊಡ್ಡ ಕೊಡುಗೆ ಕೊಟ್ಟಿದೆ ಎಂದರು. ಕಪಿಲಧಾರಾ ಡಾ. ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿ ಮಾತನಾಡಿ ಆರ್ಥಿಕ ರಾಜಕೀಯ ಸಾಮಾಜಿಕ ಧಾರ್ಮಿಕ ಪರಿಸರದಲ್ಲಿ ಪರಿವರ್ತನೆ ಆಗಿದ್ದರೂ ಜೀವನ ಮೌಲ್ಯಗಳು ಬದಲಾಗುವುದಿಲ್ಲ. ಸತ್ಯ ಶುದ್ಧ ಧರ್ಮಾಚರಣೆಯಿಂದ ಜೀವನ ಸಾರ್ಥಕಗೊಳ್ಳುವುದು ಎಂದರು.

**ಪ್ರಶಸ್ತಿ:ತ್ರಿಪುರಾಂತಕ–ಬಸವಕಲ್ಯಾಣದ ಸಮಾಜ ಸೇವಕ ಶರಣಪ್ಪ ಬಿರಾದಾರ ಇವರಿಗೆ 'ವೀರಶೈವ ಸಿರಿ' ಪ್ರಶಸ್ತಿ ಪ್ರದಾನ:**ಮಾಡಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವದಿಸಿದರು. ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಪ್ರಶಸ್ತಿ ವಾಚನ ಮಾಡಿದರು. ಶಾಸಕರಾದ ಶರಣು ಸಲಗರ, ಸಹಾಯಕ ಕಮೀಶನರ್ ಸಾವಿತ್ರಿ ಸಲಗರ ಹಾಗೂ ತಹಸೀಲ್ದಾರ ಡಾ.ದತ್ತಾತ್ರೆಯ ಗಾದಾ ಪಾಲ್ಗೊಂಡು ಮಾತನಾಡಿದರು.

**ಗೌರವ ಗುರುರಕ್ಷೆ :**

ಸೂತ್ರೇಶ್ವರ ಶಿವಾಚಾರ್ಯ ಸ್ವಾಮಿಗಳು ಅಚಲೇರಿ, ರಾಜಶೇಖರ ಶಿವಾಚಾರ್ಯ ಸ್ವಾಮಿಗಳು ಚೌದಾಪುರಿ ಮಠ ಕಲಬುರಗಿ, ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಮುಧೋಳ, ಜವಳಿ ವಿರಕ್ತಮಠದ ಗಂಗಾಧರ ಸ್ವಾಮಿಗಳು, ಬೀದರ–ಕಲಬುರ್ಗಿ ಜಿಲ್ಲಾ ಲೋಕಾಯುಕ್ತ ಸಿದ್ಧರಾಜು ಸಿ., ರಾಚಯ್ಯ ಸ್ವಾಮಿ ರಂಜೋಳ ಇವರಿಗೆ ಗೌರವ ಗುರುರಕ್ಷೆ ನೀಡಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವದಿಸಿದರು. ಬಸವಕಲ್ಯಾಣದ ವಿಶ್ರಾಂತ ಜಲಾನಯನ ಅಧಿಕಾರಿ ಬಸವಂತಪ್ಪ ಲವಾರೆ ಇವರು ಸ್ವಾಗತಿಸಿದರು. ಗುರುಲಿಂಗಯ್ಯಾ ಹಿತ್ತಲಶಿರೂರ ಮತ್ತು ರಾಜಶ್ರೀ ಇವರಿಂದ ಸಂಗೀತ ಜರುಗಿತು. ಶಿವಮೊಗ್ಗದ ಶಾಂತಾ ಆನಂದ ಹಾಗೂ ರಮೇಶ ರಾಜೋಳೆ ಶಿವಪೂರ ಇವರು ನಿರೂಪಿಸಿದರು. ಔರಾದ(ಬಿ) ಶಾಸಕ ಪ್ರಭು ಚವ್ಹಾಣ ಹಾಗೂ ಕೇದಾರನಾಥ ಚಂದ್ರಶೇಖರ ಪಾಟೀಲ ದಾಲ ಇಂಡಸ್ಟ್ರಿ ಕಲಬುರಗಿ ಇವರಿಂದ ಅನ್ನ ದಾಸೋಹ ಜರುಗಿತು.

**ನಜರ್ ಸಮರ್ಪಣೆ:**

ಸಮಾರಂಭದ ಕೊನೆಗೆ ನಡೆದ ಆಕರ್ಷಕ ನಜರ್ ಸಮರ್ಪಣೆ ಜರುಗಿತು. ನಜರ್ ಸಮರ್ಪಣೆಯ ನಿರೂಪಣೆಯನ್ನು ಮಳಲಿ ಸಂಸ್ಥನ ಮಠದ ಡಾ. ಗುರುನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ನೆರವೇರಿಸಿದರು.

# ಇಂದು ಲಿಂ. ಶ್ರೀ ಗುರುಲಿಂಗ ಶಿವಾಚಾರ್ಯರ 56 ನೇ ಪುಣ್ಯ ಸ್ಮರಣೋತವ ಮತ್ತು ಶ್ರೀ ಚನ್ನ ರೇಣುಕ ಬಸವ ಪ್ರಶಸ್ತಿ ಪ್ರಧಾನ ಸಮಾರಂಭ.



**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ : ಸೆ 30 ತಾಲೂಕಿನ ಸುಕ್ಷೇತ್ರ ಹಾರಕೂಡ ಗ್ರಾಮದ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠದಲ್ಲಿ ಇಂದು ದಿನಾಂಕ 1 ರಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಲಿಂ. ಶ್ರೀ ಗುರುಲಿಂಗ ಶಿವಾಚಾರ್ಯರ 56 ನೇ ಪುಣ್ಯ ಸ್ಮರಣೋತವ ಮತ್ತು ಶ್ರೀ ಚನ್ನ ರೇಣುಕ ಬಸವ ಪ್ರಶಸ್ತಿ ಪ್ರಧಾನ ಹಾಗೂ 39 ನೇ ಅನುಭಾವ ಪ್ರಚಾರ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ಹಾರಕೂಡದ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ವಹಿಸುವರು. ಉದ್ಘಾಟನೆ ಹಾಬಾಳ ಟಿ. ಅಭಿಷೇಕ ರೆಡ್ಡಿ ಶಿವಕುಮಾರ ರೆಡ್ಡಿ ದೇಶಮುಖ. ಅಧ್ಯಕ್ಷತೆ ಶಾಸಕರಾದ ಶರಣು ಸಲಗರ್. ಪ್ರಶಸ್ತಿ ಪ್ರದಾನ ಶ್ರೀ ಷ.ಬ್ರ ಡಾ. ಚನ್ನವೀರ ಶಿವಾಚಾರ್ಯರು ಸಂಸ್ಥಾನ ಹಿರೇಮಠ ಇವರಿಂದ ಡಾ. ಎಸ್. ಎಮ್. ಹಿರೇಮಠ ಅವರಿಗೆ. ಗ್ರಂಥ ಬಿಡುಗಡೆ ಮೈಸಲಗಾ ಶ್ರೀ ಶಿವಶರಣಯ್ಯ ಸ್ವಾಮಿ ಕಂಬಳಿಮಠ ಇವರಿಂದ ಗ್ರಂಥ 1: ಚನ್ನ ದೀಪ್ತಿ. ಲೇಖಕರು ಡಾ. ಚನ್ನವೀರ ಶಿವಾಚಾರ್ಯರು ಹಾರಕೂಡ ಗ್ರಂಥ – 2 ವೈವಿಧ್ಯ. ಲೇಖಕರು ಡಾ. ಸಂಗಮೇಶ ಸವದತ್ತಿಮಠ ಹಿರಿಯ ಸಾಹಿತಿಗಳಾದ ಧಾರವಾಡ. ಉಪನ್ಯಾಸ ಧಾರವಾಡ ಹಿರಿಯ ಸಾಹಿತಿಗಳಾದ ಡಾ. ಸಂಗಮೇಶ ಸವದತ್ತಿಮಠ ವಿಷಯ : ವೈವಿಧ್ಯ. ಮುಖ್ಯ ಅತಿಥಿಗಳಾಗಿ ಮಂಠಾಳ ಮಾಜಿ ಜಿಲ್ಲಾ ಪಂಚಾಯಿತ ಸಧ್ಯಸರಾದ ಜಗನ್ನಾಥ ಪಾಟೀಲ. ಶಿವರಾಜ ನರಶೆಟೆ. ವೀರಣ್ಣಾ ಮೂಲಗೆ. ಸಂಜುಕುಮಾರ ದೇಗಾಂವ್ ಗದಲೇಗಾಂವ. ವೀರಣ್ಣ ದುರ್ಗೆ. ಬಸವರಾಜ ಕುಂಬಾರ ವಹಿಸಲಿದ್ದಾರೆ. ಪ್ರಾರ್ಥನೆ ಡ. ಸಿದ್ದರಾಮಯ್ಯ ಸ್ವಾಮಿ ಗೋರ್ಟಾ. ಜನಾರ್ದನ ವಾಘಮಾರೆ. ನವಲಿಂಗ ಪಾಟೀಲ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ.

# ರಂಭಾಪುರಿ ಶ್ರೀಗಳು ತ್ರಿಪೂರಾಂತ ಕೆರೆ ಹೆಸರು ಬದಲಾವಣೆ ಬಗ್ಗೆ ಹೇಳಿಕೆಗೆ ವಿವಿಧ ಬಸವ ಪರ ಸಂಘಟನೆಗಳು ತೀವ್ರವಾದ ವಿರೋಧ ವ್ಯಕ್ತ.



**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ :– ಸೆ 30– ಇಲ್ಲಿನ ಐತಿಹಾಸಿಕ ತ್ರಿಪೂರಾಂತ ಕೆರೆ ಬಗ್ಗೆ 12ನೇ ಶತಮಾನದ ಬಸವಾದಿ ಶರಣರ ವಚನಗಳಲ್ಲಿ ಮತ್ತು ಶಾಸನಗಳಲ್ಲಿ ಉಲ್ಲೇಖ ಮಾಡಿದ್ದು ದಾಖಲೆಗಳು ಇದ್ದರೂ ಸಹ ದಸರಾ ದರ್ಬಾರದಲ್ಲಿ ರಂಭಾಪುರಿ ಶ್ರೀಗಳು ತ್ರಿಪೂರಾಂತ ಕೆರೆಗೆ ರೇಣುಕಾಚಾರ್ಯ ಎಂದು ವಿಜಯ ದಶಮಿ ದಿನದಂದು ಅಡಿಗಲ್ಲು ನೇರೆವೆರಿಸಿದರೆ ಉದ್ಘಾಟನೆ ಮಾಡಲು ಸಿದ್ಧ ಎಂದು ಹೇಳಿಕೆಗೆ. ಬಸವ ತತ್ವ ಪ್ರಸಾರ ಕೇಂದ್ರ, ರಾಷ್ಟ್ರೀಯ ಬಸವದಳ ಮತ್ತು ಬಸವ ಕೇಂದ್ರ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಇಲ್ಲಿನ ನಗರ ಸಭೆ ಪೌರಾಯುಕ್ತರಿಗೆ ಮನವಿ ಸಲ್ಲಿಸಿದರು. ತಿಪುರಾಂತಿನ ಕೆರೆ ಹೆಸರು ಬದಲಾವಣೆ ಮಾಡಿದರೆ ಉಗ್ರ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಶಂಕರ ಕರಣೆ, ರವೀಂದ್ರ ಕೊಳಕೂರ. ಆಕಾಶ ಖಂಡಾಳೆ, ಗಣಪತಿ ಕಾಸ್ತೆ, ಲಕ್ಷ್ಮಿಬಾಯಿ ಪಾಟೀಲ, ಬಸವರಾಜ ಬೇಲೂರೆ, ಗುರುನಾಥ ಉಮರ್ಗೆ, ಮಹಾದೇವ ಮಹಾಜನ, ಸಚಿನ ಕೌಟೆ, ಶಿವಕುಮಾರ ಬಿರಾದರ, ಶಿವಪುತ್ರ ಸಂಗನಬಸವ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


IN THE COURT OF SENOIR CIVIL JUDGE AND JMFC COURT AT HUMNABAD
Crl.Misc No. 134/2025

1. Saraswati D/o late Bakkappa W/o Kallappa Age 55 years, occu: Household,
2. Nagappa S/o late Bakkappa palanor Age 46 years, occu: Agril,
Both R/o Karaknalli Tq: Chitaguppa, Dist, Bidar.

...Petitioner.

--V/S--

The Thasildar Chitaguppa.

...Respondents.

Petition Under section 13(3) Birth & Death Registration Act-1969

PAPER PUBLICATION

Whereas the above named petitioner has filed the petition under section 13(3) of Birth and Death Registration Act 1969 praying this Honorable court to issue Death certificate of SANGAMMA W/O BAKKAPPA. The petitioners are Sons of deceased and his name shown as above. SANGAMMA W/O BAKKAPPA was died on 02.06.2015. The petitioners are claiming the death certificate of their Father for transfer of property and other official purpose and home record.

Therefore it is hereby proclaimed that if any person or persons have got any objection in this regard she/they may approach to this Honorable court on 04-10-2025 at 11.00 AM in person or authorized pleader to answer such claim otherwise the matter will be heard and determined in your absence as per law.

Given under my hand seal of the Court on this 26/09/2025

//By Order of the Court //
Chief Ministerial Officer,
Senior Civil Judge & JMFC Court,
Humnabad.

### ಬಳ್ಳಾರಿ: ಜಿಲ್ಲಾ ತ್ರೈಮಾಸಿಕ ಕೆಡಿಪಿ ಸಭೆ ನಡೆಸಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಸೂಚನೆ

# ಅಧಿಕಾರಿಗಳು ಜನಪರ ಆಡಳಿತ ಸೇವೆ ನೀಡಬೇಕು

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.30-ಜಿಲ್ಲಾಮಟ್ಟದ ಅಧಿಕಾರಿಗಳು ಜನಪರ ಆಡಳಿತ ಸೇವೆ ನೀಡಬೇಕು. ಈ ಮೂಲಕ ಸರ್ಕಾರಕ್ಕೆ ಕೀರ್ತಿ ತರಬೇಕು ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಹೇಳಿದರು.

ಸೋಮವಾರ, ನಗರದ ಜಿಲ್ಲಾ ಪಂಚಾಯತ್ ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಮೊದಲ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ ಅವರು ಮಾತನಾಡಿದರು.

ರಾಜ್ಯಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಜಿಲ್ಲೆಯಲ್ಲಿ ಶೇ.96.95 ರಷ್ಟು ಅನುಷ್ಠಾನವಾಗಿದ್ದು, ನೂರಕ್ಕೆ ನೂರರಷ್ಟು ಅನುಷ್ಠಾನವಾಗಬೇಕು ಎಂದು ಹೇಳಿದರು.

**ಯುವಕರಿಗೆ ಉದ್ಯೋಗವೂ ಕಲ್ಪಿಸಿ:**

ರಾಜ್ಯ ಸರ್ಕಾರ ನಿರುದ್ಯೋಗ ಯುವಕ-ಯುವತಿಯರಿಗೆ ಯುವನಿಧಿ ಯೋಜನೆಯಡಿ ಸಹಾಯಧನವೂ ನೀಡುತ್ತಿದೆ. ಇವರಿಗೆ ಖಾಸಗಿ ವಲಯಗಳಲ್ಲಿ ಉದ್ಯೋಗ ಹೊಂದಲು ಕಾಲ-ಕಾಲಕ್ಕೆ ಉದ್ಯೋಗ ಮೇಳ ಆಯೋಜಿಸುವ ಮೂಲಕ ಉದ್ಯೋಗ ಕಲ್ಪಿಸಬೇಕು. ಹೊಸದಾಗಿ ನೋಂದಾಯಿಸಿಕೊಳ್ಳುವ ಅಭ್ಯರ್ಥಿಗಳಿಗೆ ದಾಖಲೆ ಪರಿಶೀಲನೆ ವಿಳಂಬವಾಗುತ್ತಿದ್ದು, ಪ್ರಕ್ರಿಯೆಗೆ ವೇಗ ನೀಡಬೇಕು ಎಂದು ಜಿಲ್ಲಾ ಉದ್ಯೋಗಾಧಿಕಾರಿಗೆ ನಿರ್ದೇಶನ ನೀಡಿದರು.

**ಅಕ್ರಮ ಪಡಿತರ ಸಾಗಾಣಿಕೆಗೆ ಕಡಿವಾಣ ಹಾಕಿ:**

ನಮ್ಮ ಸರ್ಕಾರ ಜಾರಿಗೊಳಿಸಿದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ ವಿತರಣೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿರುವ ಪ್ರಕರಣಗಳು ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದು, ಅಂತವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಆಹಾರ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

**ಬಸ್ ಬೇಡಿಕೆ ಇದ್ದಲ್ಲಿ ಪ್ರಸ್ತಾವನೆ ಸಲ್ಲಿಸಿ:**

ನಮ್ಮ ಸರ್ಕಾರದ ಜನಪ್ರಿಯ ಗ್ಯಾರಂಟಿ ಯೋಜನೆ 'ಶಕ್ತಿ ಯೋಜನೆ'ಯಡಿ ಮಹಿಳೆಯರು ಉಚಿತವಾಗಿ ಬಸ್ ಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಇದರ ಜೊತೆಗೆ ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತಿರುವ ಬಗ್ಗೆ ಮನವಿಗಳು ಸಲ್ಲಿಕೆಯಾಗುತ್ತಿದ್ದು, ಈ ಕುರಿತು ಬಸ್ ಗಳ ಬೇಡಿಕೆ ಇದ್ದಲ್ಲಿ ಕೂಡಲೇ ಪ್ರಸ್ತಾವನೆ ಸಲ್ಲಿಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಿಗೆ ಹೇಳಿದರು.

**ಕೆಕೆಆರ್ ಟಿಸಿ ಡಿಸಿ ಅಮಾನತು:**

ಕೆಡಿಪಿ ಸಭೆಯಲ್ಲಿ ಶಕ್ತಿ ಯೋಜನೆಗೆ ಸಂಬಂಧಿಸಿದಂತೆ, ಪೂರಕ ಮಾಹಿತಿ ನೀಡದೇ ಇರುವುದು ಮತ್ತು ಸಭೆಗೆ ಗೈರಾಗಿದ್ದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗೀಯ ನಿಯಂತ್ರಣಾಧಿಕಾರಿಯನ್ನು ಕೂಡಲೇ ಅಮಾನತುಗೊಳಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಮಳೆಯ ಕೊರತೆಯಿಲ್ಲ, ಅದೇ ರೀತಿಯಾಗಿ ನಿಗದಿತ ಗುರಿಗಿಂತ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಜಿಲ್ಲೆಯಲ್ಲಿ ಯಾವುದೇ ರೀತಿಯ ರಸಗೊಬ್ಬರದ ಕೊರತೆ ಇರುವುದಿಲ್ಲ ಎಂದು ಕೃಷಿ ಅಧಿಕಾರಿಗಳು ಸಭೆಗೆ ತಿಳಿಸಿದರು.



ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಎಲ್ಲಾ ತಾಲ್ಲೂಕು ವ್ಯಾಪ್ತಿಯಲ್ಲಿ ರಸಗೊಬ್ಬರ ಪೂರೈಕೆಯಾಗಬೇಕು. ರೈತರಿಗೆ ಬೆಳೆ ವಿಮೆಗೆ ನೋಂದಾಯಿಸಲು ಸೂಚಿಸಬೇಕು. ಬರುವ ಹಿಂಗಾರು ಮತ್ತು ಮುಂಗಾರು ಜೋಳ ಖರೀದಿ ಪ್ರಕ್ರಿಯೆಯಲ್ಲಿ ಅವ್ಯವಹಾರವಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

**ಮಹಾನಗರ ಪಾಲಿಕೆ ಹಳೆಯ ತಾಲ್ಲೂಕು ಕಚೇರಿ ಆವರಣಕ್ಕೆ ಸ್ಥಳಾಂತರ:**

ಸುಮಾರು 30 ವರ್ಷಗಳ ಹಳೆಯ ಕಟ್ಟಡವಾದ ಬಳ್ಳಾರಿ ಮಹಾನಗರ ಪಾಲಿಕೆ ಕಚೇರಿಯನ್ನು 2.50 ಎಕರೆ ಪ್ರದೇಶವಿರುವ ನಗರದ ಹಳೆಯ ತಾಲ್ಲೂಕು ಕಚೇರಿ ಆವರಣದಲ್ಲಿ ಸುಮಾರು 30 ಕೋಟಿ ರೂ. ವೆಚ್ಚದಲ್ಲಿ ಆಧುನಿಕ ಮಾದರಿಯ ಸುಸಜ್ಜಿತ ಪಾಲಿಕೆ ಕಚೇರಿ ನಿರ್ಮಾಣ ಮಾಡಲಾಗುವುದು ಎಂದು ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ಹೇಳಿದರು. ಇದಕ್ಕೆ ಜಾಗ ಒದಗಿಸಿಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾಪಿದರು. ಹಳೆಯ ಪಾಲಿಕೆ ಕಚೇರಿ ಜಾಗದಲ್ಲಿ ವಾಣಿಜ್ಯ-ವ್ಯಾಪಾರ ಮಳಿಗೆಗಳನ್ನು ನಿರ್ಮಿಸಲಾಗುವುದು. ಹಳೆಯ ಕಚೇರಿ ಆವರಣದಲ್ಲಿರುವ ಪೊಲೀಸ್ ಠಾಣೆ, ಕೃಷಿ ಮತ್ತು ತೋಟಗಾರಿಕೆ ಕಚೇರಿಗಳನ್ನು ನೂತನ ಜಿಲ್ಲಾಡಳಿತ ಭವನಕ್ಕೆ ಸ್ಥಳಾಂತರಿಸಲಾಗುವುದು ಎಂದರು.

**ಆಸ್ಪತ್ರೆಗಳಲ್ಲಿ ಸೌಜನ್ಯದಿಂದ ವರ್ತಿಸಿ:**

ಕಳೆದ ವರ್ಷ ಜಿಲ್ಲೆಯಲ್ಲಿ ಸಂಭವಿಸಿದ ಬಾಣಂತಿಯರ ಸಾವು ಪ್ರಕರಣ-ಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಆಸ್ಪತೆಗಳಿಗೆ ಸಾರ್ವಜನಿಕರು ಬರಲು ಭಯಭೀತರಾಗುತ್ತಿದ್ದಾರೆ. ಸರ್ಕಾರಿ ಆಸ್ಪತೆಗಳಲ್ಲಿ ಜನನ ಪ್ರಮಾಣವೂ ಕುಂಠಿತಗೊಂಡಿ-ದೆ. ಹಾಗಾಗಿ ವೈದ್ಯಾಧಿಕಾರಿಗಳು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ, ಜನಸಾಮಾನ್ಯರಲ್ಲಿ ಧೈರ್ಯ ತುಂಬುವ ಕೆಲಸ ಮಾಡಬೇಕು. ಶಾಸಕರ ಕರೆಗಳಿಗೆ ಸ್ಪಂದಿಸಬೇಕು ಎಂದು ಸಚಿವರು ಹೇಳಿದರು.

ಜಿಲ್ಲೆಯಲ್ಲಿ ಪ್ರಭಾವಿಗಳಿಂದಲೇ ಸರ್ಕಾರಿ ಭೂಮಿ ಒತ್ತುವರಿಯಾಗುತ್ತಿದ್ದು, ಈ ಕುರಿತು ಪರಿಶೀಲನೆ ನಡೆಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ ಸಚಿವ ಜಮೀರ್ ಅಹ್ಮದ್ ಖಾನ್ ಅವರು, ನೆರೆಯ ರಾಜ್ಯದಿಂದ ಅಕ್ರಮವಾಗಿ ಸರಬರಾಜಾಗುವ ಸೇಂಧಿ, ಮದ್ಯ ಮತ್ತು ಗಾಂಜಾ, ಮಟ್ಕಾ, ಜೂಜು, ಬೆಟ್ಟಿಂಗ್ ದಂಧೆಗಳಿಗೆ ಕಡಿವಾಣ ಹಾಕಬೇಕು ಎಂದು ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಮೆಗಾಡೈರಿ ನಿರ್ಮಾಣಕ್ಕೆ ಸ್ಥಳ ಗುರುತಾಗಿದ್ದು, ಬೇಕಾದ ಅಗತ್ಯ ಎಲ್ಲಾ ಸೌಲಭ್ಯ ಕಲ್ಪಿಸಲಾಗುತ್ತಿದೆ. ಹಾಲು ಉತ್ಪಾದನೆ ಹೆಚ್ಚಳಕ್ಕೆ ಕೆಎಂಎಫ್ ಅಧಿಕಾರಿಗಳು ಕ್ರಮ ವಹಿಸಬೇಕು. ಶಾಲೆಗಳ ವಿದ್ಯಾರ್ಥಿಗಳಿಗೆ ಶೂ-ಸಾಕ್ಸ್ ವಿತರಣೆಯಾಗಿದೆಯೇ ಎಂಬುದರ ಕುರಿತು ಮೇಲ್ವಿಚಾರಣೆ ನಡೆಸಬೇಕು. ಎಸ್.ಎಸ್.ಎಲ್.ಸಿ ಮತ್ತು ಪಿಯು ಫಲಿತಾಂಶ ಹೆಚ್ಚಳಕ್ಕೆ ಜಿಲ್ಲೆಯನ್ನು ಮೊದಲ ಕ್ರಮಾಂಕದಲ್ಲಿ ಮುಂಚೂಣಿಯಲ್ಲಿರಿಸಲು ಅಧಿಕಾರಿಗಳು ಮುತುವರ್ಜಿ ವಹಿಸಬೇಕಿದೆ ಎಂದರು.

ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯ ಪ್ರಗತಿ ಕುರಿತಂತೆ ಪರಿಶೀಲಿಸಿದ ಸಚಿವರು, ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದರು. ಈ ವಾರಕ್ಕೆ ಬಳ್ಳಾರಿ ಜಿಲ್ಲೆಯು 18 ನೇ ಸ್ಥಾನದಲ್ಲಿದೆ ಎಂದರು.

ಸಭೆಯಲ್ಲಿ ರಾಷ್ಟ್ರೀಯ ಹೆದ್ದಾರಿ ರಸ್ತೆ ಕಾಮಗಾರಿಗಳು, ವಸತಿನಿಲಯ ಕಟ್ಟಡಗಳ ಸ್ಥಿತಿ-ಗತಿ ಕುರಿತು ಸಚಿವರು ಚರ್ಚಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಸಿರುಗುಪ್ಪ ಶಾಸಕ ಬಿ.ಎಂ.ನಾಗರಾಜ, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕ ಚಂದ್ರ, ಬಳ್ಳಾರಿ ವಲಯ ಐಜಿಪಿ ವರ್ತಿಕಾ ಕಟಿಯಾರ್, ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ., ಜಿಪಂ ಸಿಇಒ ಮಹಮ್ಮದ್ ಹ್ಯಾರೀಸ್ ಸುಮೈರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ತಾಲ್ಲೂಕು ತಹಶೀಲ್ದಾರರು, ತಾಪಂ ಇಓ ಅಧಿಕಾರಿಗಳು ಉಪಸ್ಥಿತರಿದ್ದರು.

## 'ಜನತಾ ದರ್ಶನ'ದಲ್ಲಿ ಒಟ್ಟು 114 ಅರ್ಜಿ ಸಲ್ಲಿಕೆ, ಕೆಲ ಅರ್ಜಿ ಸ್ಥಳದಲ್ಲಿಯೇ ಇತ್ಯರ್ಥ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ30-ರಾಜ್ಯಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ 'ಜನತಾ ದರ್ಶನ' ಕಾರ್ಯಕ್ರಮದಲ್ಲಿ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಸೋಮವಾರ ಸಾರ್ವಜನಿಕರ ದುಃಖ-ದುಮ್ಮಾನ ಆಲಿಸಿದರು.

ನಗರದ ಡಾ.ರಾಜ್ ಕುಮಾರ್ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲಾಡಳಿತ ವತಿಯಿಂದ ಏರ್ಪಡಿಸಿದ್ದ 'ಜನತಾ ದರ್ಶನ' ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಕೆಲವೊಂದನ್ನು ಸ್ಥಳದಲ್ಲಿಯೇ ಪರಿಹರಿಸಿದರು. ಚಿಕಿತ್ಸೆ, ಶಿಕ್ಷಣಕ್ಕಾಗಿ ವೈಯಕ್ತಿಕವಾಗಿ ಧನಸಹಾಯ ಮಾಡಿದರು.

ಜಿಲ್ಲೆಯ ತಾಲ್ಲೂಕುಗಳಿಂದ ಆಗಮಿಸಿದ ಸಾರ್ವಜನಿಕರು ಆಯಾ ಇಲಾಖೆಯ ಕೌಂಟರ್ ಬಳಿ ಅರ್ಜಿ ಸಲ್ಲಿಸಿದರೇ, ಇನ್ನೂ ಕೆಲವರು ನೇರವಾಗಿ ಉಸ್ತುವಾರಿ ಸಚಿವರಿಗೆ, ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರು. ಸ್ವತಃ ಸಚಿವರೇ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಜಿಲ್ಲಾಧಿಕಾರಿಗಳು ಸಹ ಸ್ಥಳದಲ್ಲೇ ಇದ್ದು ಇದರ ಬಗ್ಗೆ ಮಾಹಿತಿ ಪಡೆದುಕೊಂಡರು.

ಜನಸ್ಪಂದನಾ ಮೂಲಕ ಕೇವಲ ಸಾರ್ವಜನಿಕರ ಅಹವಾಲು ಕೇಳುವುದು ಮಾತ್ರವಲ್ಲದೇ ಆದಷ್ಟು ಶೀಘ್ರವಾಗಿ ಪರಿಹಾರ ಒದಗಿಸುವ ಕ್ರಮವನ್ನು ಕೈಗೊಂಡು ನಾಗರಿಕರಿಗೆ ಭರವಸೆ ಮೂಡಿಸಲಾಯಿತು. ಸಾರ್ವಜನಿಕರಿಂದ ಸಲ್ಲಿಕೆಯಾದ ಅರ್ಜಿಗಳನ್ನು ಐಪಿಜಿಆರ್ಎಸ್ ತಂತ್ರಾಂಶದಲ್ಲಿ ನಮೂದಿಸಿ ಮೊಬೈಲ್ ಮೂಲಕ ಅರ್ಜಿದಾರರನ್ನು ಸಂಪರ್ಕಿಸಿ ಪರಿಹಾರ ಒದಗಿಸಲಾಗುತ್ತದೆ.

ವಿವಿಧ ಇಲಾಖೆಯ 16 ಕೌಂಟರ್ ಸ್ಥಾಪನೆ: ಸಾರ್ವಜನಿಕರಿಂದ ಅಹವಾಲು ಸಲ್ಲಿಕೆಗೆ ಜಿಲ್ಲಾಡಳಿತದಿಂದ ಒಟ್ಟು 16 ಕೌಂಟರ್ ಗಳನ್ನು ಸ್ಥಾಪಿಸಲಾಗಿತ್ತು. ಇಲಾಖಾವಾರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲು ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಕಂದಾಯ ಇಲಾಖೆ ಸೇರಿದಂತೆ ಭೂದಾಖಲೆ,



ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಆರೋಗ್ಯ, ಕೃಷಿ ಹಾಗೂ ತೋಟಗಾರಿಕೆ ಇಲಾಖೆ, ಅಬಕಾರಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜೆಸ್ಕಾಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ನಗರಾಭಿವೃದ್ಧಿ ಕೋಶ, ಸಾರಿಗೆ ಇಲಾಖೆ, ಕಾರ್ಮಿಕ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಅಂಗವಿಕಲ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರೇಷ್ಮೆ ಇಲಾಖೆಗಳ, ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ವಿವಿಧ ಇಲಾಖೆಗಳ ಕೌಂಟರ್ ತೆರೆದು ಸಾರ್ವಜನಿಕರಿಂದ ಅರ್ಜಿ ಮತ್ತು ಅಹವಾಲುಗಳನ್ನು ಸ್ವೀಕರಿಸಿ ಕಂಪ್ಯೂಟರ್‌ನಲ್ಲಿ ನಮೂದಿಸಿ ಸ್ವೀಕೃತಿಯನ್ನು ಅರ್ಜಿದಾರರಿಗೆ ನೀಡಲಾಯಿತು.

ಜನತಾ ದರ್ಶನದಲ್ಲಿ ವಿವಿಧ ತಾಲ್ಲೂಕಿನಿಂದ ಆಗಮಿಸಿದ ಸಾರ್ವಜನಿಕರು ಆಯಾ ಇಲಾಖೆಯ ಕೌಂಟರ್‌ಗಳ ಬಳಿ ತೆರಳಿ ತಮ್ಮ ಅಹವಾಲುಗಳನ್ನು ಸಲ್ಲಿಸಿದರು. ಒಟ್ಟು 114 ಅರ್ಜಿಗಳನ್ನು ಸ್ವೀಕರಿಸಲಾಯಿತು. ಅವುಗಳಲ್ಲಿ ಕೆಲವು ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಲಾಯಿತು.

ಈ ವೇಳೆಯಲ್ಲಿ ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್, ಉಪಮೇಯರ್ ಡಿ.ಸುಕುಂ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ವರ್ತಿಕ ಕಟಿಯಾರ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್, ಸಹಾಯಕ ಆಯುಕ್ತ ಪಿ.ಪ್ರಮೋದ್ ಸೇರಿದಂತೆ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಪಾಲಿಕೆಯ ಅಧ್ಯಕ್ಷರು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.



ಜೇವರ್ಗಿ: ತಾಲ್ಲೂಕಿನ ಕಟ್ಟಿಸಂಗಾವಿ ಹೆದ್ದಾರಿ ಮೇಲಿರುವ ಹೊಸ ಸೇತುವೆ ಭೀಮಾನದಿಯ ಪ್ರವಾಹದಿಂದ ಜಲಾವೃತಗೊಂಡು ವಾಹನ ಸವಾರರು ಪರದಾಡುವಂತಾಗಿದೆ.

## ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ. (ಮೇಜರ) ಪಿ. ವಿಠ್ಠಲ ರಡ್ಡಿ ಅವರ ವಯೋನಿವೃತ್ತಿ ಸಮಾರಂಭ

**ಮಲ್ಲಮ್ಮ ನುಡಿ ವಾರ್ತೆ**

ಬೀದರ: ನಗರದ ಬಿ.ವಿ.ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾದ ಡಾ.(ಮೇಜರ) ಪಿ. ವಿಠ್ಠಲ ರಡ್ಡಿ ಅವರ ವಯೋನಿವೃತ್ತಿ ಸಮಾರಂಭವನ್ನು ಬೀದರ ವಿಶ್ವವಿದ್ಯಾಲಯ ಬೀದರ ಕುಲಪತಿಗಳಾದ ಡಾ. ಬಿ.ಎಸ್. ಬಿರಾದಾರ ಅವರ ಅಮೃತ ಹಸ್ತದಿಂದ ಜ್ಯೋತಿ ಬೆಳಗುವುದರೊಂದಿಗೆ, ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ರಡ್ಡಿಯವರು ತಮ್ಮ ಅವಧಿಯಲ್ಲಿ ಚಾಚುತಪ್ಪದೇ ತಮ್ಮ ವಿದ್ಯಾರ್ಥಿಗಳ ಏನಾದರು ಸಮಸ್ಯೆಗಳು ಇದ್ದರೇ ತಕ್ಷಣ ಗುಲಬಗಾ ವಿಶ್ವವಿದ್ಯಾಲಯ ಕಲಬುರಗಿ ಹಾಗೂ ಬೀದರ ವಿಶ್ವವಿದ್ಯಾಲಯ ಬೀದರಿಗೆ ಕರೆ ಮಾಡಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವ ಚಾಣಾಕ್ಷತನ ಅವರಲ್ಲಿದೆ ವಿಶ್ವವಿದ್ಯಾಲಯದ ಯಾವುದೇ ಕಾರ್ಯಗಳು ಇದ್ದರು ತಮ್ಮ ಮಹಾವಿದ್ಯಾಲಯ ಸಹಾಯಹಸ್ತಕ್ಕೆ ಯಾವುದೇ ಸಮಯದಲ್ಲಿ ಸದಾಸಿದ್ಧ ಎಂದು ಹೇಳಿಕೊಳ್ಳುವ ಛಲಗಾರಿಕೆ ಅವರಲ್ಲಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಇನ್ನೋರ್ವ ಮುಖ್ಯ ಅತಿಥಿಯಾಗಿ ಆಗಮಿಸಿದ ಉತ್ತರ ಕರ್ನಾಟಕ ದಿನ ಪತ್ರಿ-ಕೆಯ ಪ್ರಧಾನ ಸಂಪಾದಕರಾದ ಹಿರಿಯ ಜೀವಿ ಶ್ರೀ ಶಿವಶರಣಪ್ಪಾ ವಾಲಿಯವರು ಮಾತನಾಡುತ್ತಾ ಕಲ್ಯಾಣ ಕರ್ನಾಟಕ ಹಿಂದುಳಿದ ಭಾಗವಲ್ಲ ಈ ಭಾಗದಲ್ಲಿ ಅನೇಕ ಜನ ಬುದ್ಧಿಜೀವಿಗಳು ಇದ್ದಾರೆ ಆದರೆ ಇಲ್ಲಿನ ವಿಶ್ವವಿದ್ಯಾಲಯಗಳಿಗೆ ಸರ್ಕಾರದಿಂದ ಅನುದಾನದ ಕೊರತೆಯಿದೆ. ಈ ಭಾಗದ ಶಾಸಕರು, ಮಂತ್ರಿಗಳು ವಿಧಾನ ಸಭೆಯಲ್ಲಿ ಧ್ವನಿ ಎತ್ತಿದಾಗ ಮಾತ್ರ ನಮ್ಮ ಭಾಗಕ್ಕೆ ಅನುದಾನ ಬರಲು ಸಾಧ್ಯ ಆಗ ನಮ್ಮ ವಿದ್ಯಾರ್ಥಿಗಳಿಗೆ 371(ಜೆ) ಪ್ರಕಾರ ಹಲವಾರು ಸವಲತ್ತುಗಳು ದೊರೆತು ವಿದ್ಯಾರ್ಜನೆ ಮತ್ತು ಹುದ್ದೆ ಪಡೆದುಕೊಳ್ಳಲು ಅನುಕೂಲವಾಗುತ್ತದೆ ಎಂದು ಮಾರ್ಮಿಕವಾಗಿ ನುಡಿದರು.




ಕಾರ್ಯಕ್ರಮದಲ್ಲಿ ಇನ್ನೋರ್ವ ಮುಖ್ಯ ಅತಿಥಿಯಾಗಿ ಆಗಮಿಸಿದ ಗ್ಲೋಬಲ್ ಸೈನಿಕ ಅಕಾಡೆಮಿಯ ಅಧ್ಯಕ್ಷರಾದ ಕರ್ನಲ್ ಶರಣಪ್ಪಾ ಸಿಕೆನಪುರ ಅವರು ಮಾತನಾಡುತ್ತಾ ಈ ಭಾಗದ ವಿದ್ಯಾರ್ಥಿಗಳಿಗೆ ಸೈನಿಕ ಶಾಲೆಯಲ್ಲಿ ದಾಖಲಾತಿ ಪಡೆದು ಮುಂದೆ ಸೈನ್ಯದಲ್ಲಿ ಸೈನಿಕನಾಗಿ ಸೇವೆ ಸಲ್ಲಿಸಲು ಅನುಕೂಲವಾಗುತ್ತದೆ ನಮ್ಮ ಭಾಗದಲ್ಲಿ ಕೊರತೆ ಏನೆಂದರೆ ಈ ಭಾಗದಿಂದ ಯಾವುದೇ ವಿದ್ಯಾರ್ಥಿ ಪೈಲೆಟ್ ಆಗಿಲ್ಲ ನಮ್ಮಂತಹ ಶಿಕ್ಷಣ ಸಂಸ್ಥೆಗಳು ಅವರಿಗೆ ತರಬೇತಿಕೊಟ್ಟು ಉನ್ನತ ಹುದ್ದೆ ಪಡೆದುಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದು ನುಡಿದರು. ಕಾರ್ಯಕ್ರಮದಲ್ಲಿ ಇನ್ನೋರ್ವ ಅತಿಥಿಗಳಾದ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ರಾಜ್ಯಾಧ್ಯಕ್ಷರಾದ ಡಾ. ಚಂದ್ರಶೇಖರ ಪಾಟೀಲ ಅವರು ಮಾತನಾಡುತ್ತಾ ರಡ್ಡಿಯವರು ಸಮಯ ಪಾಲನೆ ಶಿಸ್ತು, ಹಾಗೂ ಕಾರ್ಯಕ್ಷಮತೆಗೆ ಹೆಸರುವಾಸಿಯಾದವರು ಜಂಟಿ ನಿರ್ದೇಶಕರ ಕಛೇರಿ, ವಿಶ್ವವಿದ್ಯಾಲಯದ ಕಾರ್ಯಕಲಾಪಗಳು ಹಾಗೂ ವಿದ್ಯಾರ್ಥಿಗಳ ಸಮಸ್ಯೆಗಳು ಯಾವುದೇ ಇದ್ದರು ತಕ್ಷಣ ಸ್ಪಂದಿಸುವವರು ಹಾಗೂ ದಯಾಳುಗಳು ಇವರ ಮಾರ್ಗದರ್ಶನದಲ್ಲಿ ನ್ಯಾಕನಿಂದ 'ಎ' ಪಡೆದುಕೊಂಡಿದೆ ಎಂದು ಮಾರ್ಮಿಕ ನುಡಿದರು. ಕಾರ್ಯಕ್ರಮದಲ್ಲಿ ಇನ್ನೋರ್ವ ಅತಿಥಿಗಳಾದ ಡಾ. ಕಿಣ್ಣಿಯವರು ಮಾತನಾಡುತ್ತಾ ರಡ್ಡಿಯವರ ವಿಶಾಲ ಹೃದಯ ಅವರನ್ನು ಆಕಾಶದೆತ್ತರಕ್ಕೆ ಇವರ ಕೀರ್ತಿ ಹರಡಿದೆ ಅವರ ನನ್ನ ಸಹೃದಯಿಗಳು ಸದಾ ಮಹಾವಿದ್ಯಾಲಯದ ಕೀರ್ತಿ ಯಶಸ್ಸಿಗೆ ಸದಾ ಅವರ ಹೃದಯ ತೆರೆದುಕೊಳ್ಳುವಂತಹದು ಎಂದು ಅವರ ಬಗ್ಗೆ ಸದಾಶಯ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ಡಾ.(ಮೇಜರ) ಪಿ. ವಿಠ್ಠಲರಡ್ಡಿಯವರು ಮಾತನಾಡುತ್ತಾ ನಮ್ಮ ಈ ಮಹಾವಿದ್ಯಾಲಯ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳನ್ನು ಉನ್ನತ ಹುದ್ದೆ ಪಡೆದುಕೊಳ್ಳಲು ನಮ್ಮಲ್ಲಿ ಗ್ರಂಥಾಲಯದ ಸೌಲಭ್ಯವಿದೆ ಹಾಗೂ ಎನ್.ಸಿ.ಸಿ., ಎನ್.ಎಸ್.ಎಸ್. ಮುಖಾಂತರ ವಿದ್ಯಾರ್ಥಿಗಳು ಗಣರಾಜ್ಯೋತ್ಸವ ಪರೇಡಿನಲ್ಲಿ ಭಾಗವಹಿಸಿ ಉನ್ನತ ಹುದ್ದೆ ಪಡೆಯಲು ಅವಕಾಶವಾಗುತ್ತದೆ ಎಂದು ನುಡಿದರು ಹಾಗೂ ಈ ಮಹಾವಿದ್ಯಾಲಯ ನನಗೆ ಸಮಾಜದಲ್ಲಿ ಅತೀ ಉನ್ನತ ಸ್ಥಾನಕ್ಕೆ ಕೊಂಡ್ಯೋದಿದೆ ಎಂದು ತಮ್ಮ ಮನದಾಳದ ಮಾತನ್ನು ನುಡಿದರು. ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ ಹೈ.ಕ.ಶಿ. ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಬಿ.ವಿ.ಬಿ. ಶಾಲಾ ಕಾಲೇಜುಗಳ ಆವರಣದ ಅಭಿವೃದ್ಧಿ ಮಂಡಳಿ ಸಂಚಾಲಕರಾದ ಡಾ. ರಜನೀಶ ಎಸ್.ವಾಲಿಯವರು ಮಾತನಾಡುತ್ತಾ ರಡ್ಡಿಯವರು ಸಮಯ ಪಾಲನೆ ಶಿಸ್ತು, ದಯಾಳು ಹಾಗೂ ಸದಾ ಮಹಾವಿದ್ಯಾಲಯದ ಕಾರ್ಯ-ಕ್ಕೆ ಸಮಯಕೊಡುವಂತಹ ದಕ್ಷ ಅಧಿಕಾರಿಗಳು ಇಂತಹ ವ್ಯಕ್ತಿಗಳು ಸಮಾಜಕ್ಕೆ ಆದರ್ಶವಾಗಿದ್ದಾರೆ ಹೈ.ಕ.ಶಿ. ಹಾಗೂ ಮಹಾವಿದ್ಯಾಲಯಕ್ಕೆ ಮಾದರಿ ಇವರ ನಿವೃತ್ತಿ ಜೀವನ ಸದಾ ಸುಖಸಂತೋಷದಿಂದ ತುಂಬಿರಲಿ ಎಂದು ದೂರವಾಣಿ ಕರೆ ಮುಖಾಂತರ ಮಾರ್ಮಿಕವಾಗಿ ನುಡಿದರು ಹಾಗೂ ಹೈ.ಕ.ಶಿ. ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ರಾಜಾ ಭೀಮಳ್ಳಿಯವರು ದೂರವಾಣಿ ಕರೆ ಮುಖಾಂತರ ಡಾ. ಪಿ. ವಿಠ್ಠಲ ರಡ್ಡಿ ನಿವೃತ್ತಿ ಜೀವನ ಅತ್ಯಂತ ಸುಖಕರ ಹಾಗೂ ಸಂತೋಷದಿಂದ ತುಂಬಿರಲಿ ದೇವರು ಅವರಿಗೆ ಆಯುಷ್ಯ ಆರೋಗ್ಯ ಕೊಟ್ಟು ಕರುಣಿಸಲಿ ಎಂದು ಶುಭ ಹಾರೈಸಿದರು.

ಈ ಕಾರ್ಯಕ್ರಮದಲ್ಲಿ ನಿವೃತ್ತ ಬಗ್ಗೆ ಅನಿಸಿಕೆಗಳನ್ನು ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ, ರಸಾಯನಶಾಸ್ತ್ರ ವಿಭಾಗ ಮುಖ್ಯಸ್ಥರಾದ ಡಾ. ಮಲ್ಲಿಕಾರ್ಜುನ ಕೋಟೆ, ಡಾ. ಅನುಸುಯಾ ಪಾಟೀಲ, ರಡ್ಡಿಯವರ ಸುಪುತ್ರಿಯಾದ ಡಾ. ಶ್ವೇತಾ ರಡ್ಡಿ, ನಿಕಟಪೂರ್ವ ನಿವೃತ್ತ ಉಪ ಪ್ರಾಂಶುಪಾಲರಾದ ಶ್ರೀ ಅನೀಲಕುಮಾರ ಅಣದೂರೆ, ಹಾಗೂ ಕಛೇರಿಯ ಅಧೀಕ್ಷಕರಾದ ಶ್ರೀ ಸುಜೀತಕುಮಾರ ಪಿ. ಹೇಳಿದರು. ಕಾರ್ಯಕ್ರಮದ ವೇದಿಕೆಯ ಮೇಲೆ ರಡ್ಡಿಯವರ ಪಿ.ಹೆಚ್‌ಡಿ. ಮಾರ್ಗದರ್ಶಕಾರಾದ ಡಾ. ಎಂ.ಬಿ.ಹಳ್ಳಿಯವರು ಉಪಸ್ಥಿತರಿದ್ದರು. ಕಾರ್ಯಕ್ರಮ ಮೊದಲಿಗೆ ಸ್ವಾಗತ ಗೀತೆಯನ್ನು ಶ್ರೀಮತಿ ರೇಣುಕಾದೇವಿ ಸ್ವಾಮಿ ಹಾಡಿದರೆ, ಸ್ವಾಗತವನ್ನು ಡಾ. ಸೂರ್ಯವಂಶಿ ಪೂಜಾ ನಡೆಸಿಕೊಟ್ಟರೆ ಪ್ರಾಸ್ತಾವಿಕ ನುಡಿಯನ್ನು

## ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ: ಜಿಲ್ಲಾ ಉಸ್ತುವಾರಿ ಸಚಿವರಿಂದ ಸ್ಥಳ ಪರಿಶೀಲನೆ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.30-ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮ ಆಯೋಜನೆ ಕುರಿತಂತೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಸೋಮವಾರ ಸ್ಥಳ ಪರಿಶೀಲನೆ ನಡೆಸಿದರು.

ನಗರದ ಕಪ್ಪಗಲ್ಲು ರಸ್ತೆಯ ಸಂಗನಕಲ್ಲು ಬೆಟ್ಟದ ಬಳಿಯ ಪ್ರದೇಶ, ಹೊರವಲಯದ ಕೊಳಗಲ್ ರಸ್ತೆಯ ವಿಮಾನ ನಿಲ್ದಾಣದ ಪ್ರದೇಶ ಹಾಗೂ ನಗರದ ಹೊರವಲಯದ ಹೊಸಪೇಟೆ ರಸ್ತೆಯ ಶ್ರೀ ಸದ್ಗುರು ಮಹಾದೇವ ತಾತನವರ ಮಠ ಹತ್ತಿರದ ದಾರದ ಮಿಲ್ ಪ್ರದೇಶದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವ ಸಂಬಂಧ ಸ್ಥಳ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್, ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ವರ್ತಿಕ ಕಟಿಯಾರ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್, ಸಹಾಯಕ ಆಯುಕ್ತ ಪಿ.ಪ್ರಮೋದ್, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ಡಾ.ಶಿವಲಿಂಗಪ್ಪ ಹಂದ್ಯಾಳು ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು, ಪಾಲಿಕೆಯ ಸದಸ್ಯರು, ಕಸಾಪ ಪದಾಧಿಕಾರಿಗಳು ಹಾಗೂ ಇತರರು ಹಾಜರಿದ್ದರು.

## ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಬೇಕು: ಡಾ. ಇಂದ್ರಜೀತ್




**ಮಲ್ಲಮ್ಮ ನುಡಿ ವಾರ್ತೆ**

ಹುಮನಾಬಾದ: ಯಾವುದೇ ಮುನ್ಸೂಚನೆ ನೀಡದೆ ನೇರವಾಗಿ ಸಾವಿನ ಬಾಗಿಲಿಗೆ ಕೊಂಡೊಯ್ಯುವ ಏಕೈಕ ರೋಗ ಹೃದ್ರೋಗ. ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಅಗತ್ಯವಾಗಿದೆ ಎಂದು ಶ್ರೀ ವೀರಭದ್ರೇಶ್ವರ ಹೋಮಿಯೋಪತಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಇಂದ್ರಜೀತ್ ಪಿ.ಶಾರವರು ಹೇಳಿದರು. ಹುಮನಾಬಾದ ಪಟ್ಟಣದ ಬಸ್ ನಿಲ್ದಾಣದ ಆವರಣದಲ್ಲಿ ವಿಶ್ವ ಹೃದಯ ದಿನಾಚರಣೆ ಮತ್ತು ಉಚಿತ ಹೃದ್ರೋಗ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಸಣ್ಣ ಮಕ್ಕಳೂ ಕ್ಯಾನ್ಸರ್ ಪೀಡಿತರಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದ್ದು, ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಆರೋಗ್ಯ ವ್ಯವಸ್ಥೆಯೇ ಅಪಾಯಕ್ಕೆ ಸಿಲುಕುವ ಸಂಭವವಿದೆ. ಹೀಗಾಗಿ ದೇಶದ ಒಟ್ಟು ವ್ಯವಸ್ಥೆಯಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ ಎಂದರು. ಮಾತನಾತನಾಡಿ, ಜೀವನಶೈಲಿ ಚೆನ್ನಾಗಿರಬೇಕು ಪ್ರತಿನಿತ್ಯ ಯೋಗ ವ್ಯಾಯಾಮದಂತಹ ಚಟುವಟಿಕೆಯಲ್ಲಿ ನಿರತವಾರಬೇಕು ಅಲ್ಲದೇ ಆಹಾರ ಪದ್ಧತಿ ಚೆನ್ನಾಗಿರಬೇಕು ಎಂದು ಸಲಹೆ ನೀಡಿದರು. ಶಿಬಿರವು ಅಗತ್ಯವಿರುವ ರೋಗಿಗಳಿಗೆ ಉಚಿತ ರಕ್ತದಲ್ಲಿನ ಸಕ್ಕರೆ ಮತ್ತು ರಕ್ತದೊತ್ತಡ ತಪಾಸಣೆಯ ಜೊತೆಗೆ ಹೋಮಿಯೋಪತಿ ಔಷಧಿಗಳನ್ನು ವಿತರಿಸಿತು. ಈ ಕಾರ್ಯಕ್ರಮವನ್ನು ಹುಮನಾಬಾದ ಕೆಎಸ್ಆರ್‌ಟಿಸಿ ಡಿಎಂ ರವೀಂದ್ರ, ಎಟಿಐ ಹನುಮಂತ್ ಹಾಗೂ ಶಿಂಧಿ ಡಿಪೋ ಇನ್ಚಾರ್ಜ್ ರಮೇಶ್, ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಪ್ರಾಂಶುಪಾಲರಾದ ಡಾ. ಇಂದ್ರಜೀತ್ ಪಿ. ಶಾ ರವರು ಕೆಎಸ್ಆರ್‌ಟಿಸಿ ಡಿಎಂ ರವೀಂದ್ರರವರನ್ನು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮವನ್ನು ಅಧ್ಯಾಪಕರು, ವೈದ್ಯಕೀಯ ಅಧಿಕಾರಿಗಳು ಮತ್ತು ಅಂತಿಮ ವರ್ಷದ ಬಿಎಚ್‌ಎಂಎಸ್ ವಿದ್ಯಾರ್ಥಿಗಳು ಬೆಂಬಲಿಸಿದರು, ಶ್ರೀಮತಿ ಇರಮಿ ಮತ್ತು ಶ್ರೀಮತಿ ನಿಕಿತಾ ವಿಶ್ವಹೃದಯ ಬಗ್ಗೆ ಸಾವಿಸ್ತರವಾಗಿ ವಿವರಿಸಿದರು. ಶ್ರೀ ವೀರಭದ್ರೇಶ್ವರ ಹೋಮಿಯೋಪತಿ ಕಛೇ-ರಿಯ ಅಧೀಕ್ಷಕರಾದ ಸಂಜಯ್ ಗುತ್ತೇದಾರ, ಸಾರ್ವಜನಿಕರು, ಆರೋಗ್ಯ ಪ್ರೇಮಿಗಳು ಉತ್ಸಾಹದಿಂದ ಭಾಗವಹಿಸಿದರು.

# ಯುಕ್ತದಾರ ತಂತ್ರಾಂಶ ತರಬೇತಿ;ಕಾರ್ಯಾಗಾರಕ್ಕೆ ಸಿಇಒ ಶಶಿಧರ ಕುರೇರ ಚಾಲನೆ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.30–ಮಹಾತ್ಮಾಗಾಂಧಿ ನರೇಗಾ ಯೋಜನೆಯಡಿ ಹಮ್ಮಿಕೊಂಡ ಯುಕ್ತದಾರ ತಂತ್ರಾಂಶ ಕುರಿತ ಒಂದು ದಿನದ ಕಾರ್ಯಾಗಾರ–ಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಂಗಳವಾರ ಚಾಲನೆ ನೀಡಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಹಮ್ಮಿಕೊಂಡ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ಹಾಗೂ ಕರ್ನಾಟಕ ಅಬಿವೃದ್ಧಿ ಆಯುಕ್ತಾಲಯದ ನಿರ್ದೇಶನದಂತೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಿಐಎಸ್ ಆಧಾರಿತ ಕಾಮಗಾರಿಗಳನ್ನು ಯುಕ್ತದಾರ ತಂತ್ರಾಂಶದಲ್ಲಿ ವೈಜ್ಞಾನಿಕವಾಗಿ ತಯಾರಿಸಬೇಕಾಗಿರುವದರಿಂದ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಅದರಂತೆ 2026–27ನೇ ಸಾಲಿನಲ್ಲಿ ಯುಕ್ತದಾರ ತಂತ್ರಾಂಶದ ಮೂಲಕ ಯೋಜನೆಯನ್ನು ಸಿದ್ಧಪಡಿಸಲು, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಯುಕ್ತದಾರ ತಂತ್ರಾಂಶ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಯುಕ್ತದಾರ ತಂತ್ರಾಂಶವನ್ನು ಈಗಾಗಲೇ ಹಲವು ರಾಜ್ಯಗಳು ಅಳವಡಿಸಿಕೊಂಡು ಕಾರ್ಯ ನಿರ್ವಹಿಸುತ್ತಿವೆ. ಸರ್ಕಾರದ ಅನುದಾನ ಪೋಲಾಗದಂತೆ ನೋಡಿಕೊಳ್ಳುವ ಜೊತೆಗೆ ಕಾರ್ಯ ಪೂರ್ಣಗೊಳಿಸುವ ಸಾಮರ್ಥ್ಯಕ್ಕನುಗುಣವಾಗಿ ಕಾಮಗಾರಿ ಕೈಗೊಳ್ಳುವಂತೆ ತಿಳಿಸಿದರು.

ಜಿ.ಪಂ ಉಪಕಾರ್ಯದರ್ಶಿ ಎನ್.ವೈ.ಬಸರಿಗಿಡದ ಮಾತನಾಡಿ, ಪಿಡಿಒ ಮತ್ತು ತಾಂತ್ರಿಕ ಸಿಬ್ಬಂದಿಗಳು ಇ–ಸಕ್ಷಮ ಮೂಲಕ ನೊಂದಣಿಯಾಗಿ ಯುಕ್ತದಾರ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳಲು ಸೂಚಿಸಿದರು. ಅಲ್ಲದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಕಾರ್ಮಿಕರ, ಜಾಬಕಾರ್ಡ್ ಹೊಂದಿದ, ಸಕ್ರಿಯ ಕಾರ್ಮಿಕ ಕುಟುಂಬಗಳ ಮೂರು ವರ್ಷಗಳ ಸರಾಸರಿ ಗಮನಿಸಿ ಮುಂದಿನ ಕಾಮಗಾರಿಗಳ ರೂಪುರೇಷೆ ತಯಾರಿಸುವಂತೆ ಆಯಾ ಗ್ರಾಮ ಸಭೆಗಳಲ್ಲಿ ಚರ್ಚಿಸಲು ತಿಳಿಸಿದರು.

ಯುಕ್ತದಾರ ತಂತ್ರಾಂಶ ಕುರಿತು ಜಿಲ್ಲಾ ಪಂಚಾಯತಿ ನರೇಗಾ ಸಿಬ್ಬಂದಿಯಾದ ರಾಜೇಶ್ವರಿ ಗಡೇದ ಹಾಗೂ ಉಜ್ವಲ ಸಕ್ರಿ, ತಾಲೂಕ ಮಟ್ಟದ ನರೇಗಾ ಸಿಬ್ಬಂದಿ ಬಾಹುಬಲಿ ಮುರಗುಂಡಿ ಹಾಗೂ ನವೀನ ಹಂಚಾಟೆ ತರಬೇತಿ ನೀಡಿದರು. ತರಬೇತಿಯಲ್ಲಿ ಸಾಮಾಜಿಕ ಅರಣ್ಯ, ಪ್ರಾದೇಶಿಕ ಅರಣ್ಯ, ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಪಂಚಾಯತ ರಾಜ್ ಇಲಾಖೆಯ ಜಿಲ್ಲಾ ಹಾಗೂ ತಾಲೂಕು, ಹೋಬಳಿ ಮಟ್ಟದ ಅಧಿಕಾರಿಗಳು, ಜಿಲ್ಲೆಯ ಎಲ್ಲ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಜಿಲ್ಲೆಯ ಎಲ್ಲ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಜಿಲ್ಲೆಯ ಎಲ್ಲ ತಾಂತ್ರಿಕ ಸಂಯೋಜಕರು ತಾಂತ್ರಿಕ ಸಹಾಯಕರು ಇದ್ದರು.

# ಬೆಂಬಲ ಬೆಲೆಯಲ್ಲಿ ಸೂರ್ಯಕಾಂತಿ, ಹೆಸರು ಖರೀದಿ ಪ್ರಾರಂಭ

**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.30–ಪ್ರಸಕ್ತ ಸಾಲಿನ ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ, ಹೆಸರುಕಾಳು ಹಾಗೂ ಸೋಯಾಬಿನ್ ಉತ್ಪನ್ನಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಟಾಸ್ಕಫೋರ್ಸ ಸಮಿತಿಯ ಅದ್ಯಕ್ಷರಾದ ಸಂಗಪ್ಪ ತಿಳಿಸಿದ್ದಾರೆ.

ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕ್ರಾಂತಿ ಪ್ರತಿ ಕ್ವಿಂಟಲ್‌ಗೆ 7,721 ರೂ. ದರದಂತೆ ಪ್ರತಿ ಎಕರೆಗೆ 4 ಕ್ವಿಂಟಲ್‌ನಂತೆ ಪ್ರತಿ ರೈತರಿಂದ ಗರಿಷ್ಠ ಪ್ರಮಾಣ 20 ಕ್ವಿಂಟಲ್ ಖರೀದಿ ಪ್ರಮಾಣ ನಿಗದಿಪಡಿಸಲಾಗಿದೆ. ಹೆಸರುಕಾಳು ಪ್ರತಿ ಕ್ವಿಂಟಲ್‌ಗೆ 8768 ರೂ.ಗಳಂತೆ ಪ್ರತಿ ಎಕರೆಗೆ 3 ಕ್ವಿಂಟಲ್ ನಂತೆ ಗರಿಷ್ಠ 15 ಕ್ವಿಂಟಲ್ ಹಾಗೂ ಉದ್ದಿನಕಾಳು ಪ್ರತಿ ಕ್ವಿಂಟಲ್‌ಗೆ 7800 ರೂ.ಗಳಂತೆ ಪ್ರತಿ ಎಕರೆಗೆ 5 ಕ್ವಿಂಟಲ್ ನಂತರ ಪ್ರತಿ ರೈತರಿಂದ ಗರಿಷ್ಠ 30 ಕ್ವಿಂಟಲ್ ಖರೀದಿಸಲಾಗುತ್ತದೆ. ಸೋಯಾಬಿನ್ ಪ್ರತಿ ಕ್ವಿಂಟಲ್‌ಗೆ 5328 ರೂ.ಗಳಂತೆ ಪ್ರತಿ ಎಕರೆಗೆ 5 ಕ್ವಿಂಟಲ್‌ನಂತೆ ಗರಿಷ್ಠ 20 ಕ್ವಿಂಟಲ್ ಖರೀದಿ ಪ್ರಮಾಣ ನಿಗದಿಪಡಿಸಲಾಗಿದೆ.

ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗದಿಪಡಿಸಲಾಗಿದ್ದು, ನೋಂದಣಿ ಪ್ರಕ್ರಿಯೆ ಜೊತೆಗೆ ಖರೀದಿ ಪ್ರಕ್ರಿಯೆ ಪ್ರಾರಂಭಗೊಳಿಸಲಾಗುತ್ತಿದೆ. ಜಿಲ್ಲೆಯ ರೈತರು ನೋಂದಣಿ ಹಾಗೂ ಖರೀದಿ ಕೇಂದ್ರಗಳಲ್ಲಿ ಆಧಾರ ಕಾರ್ಡ, ಪಹಣಿ ಪತ್ರಿಕೆ, ಆಧಾರ ಲಿಂಕ ಆಗಿರುವ ರಾಷ್ಟ್ರೀಕೃತ ಬ್ಯಾಂಕಿನ ಪಾಸಬುಕ್ಕ ಪ್ರತಿಯನ್ನು ಸಲ್ಲಿಸಿ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳಿ ಜಿಲ್ಲಾ ಶಾಖಾ ವ್ಯವಸ್ಥಾಪಕರ ಕಚೇರಿ (9449864458), ಸಹಾಯಕ ನಿರ್ದೇಶಕರು, ಎಪಿಎಂಸಿ, ಬಾಗಲಕೋಟೆ (9448100779)ಗೆ ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಸೂರ್ಯಕಾಂತಿ ಉತ್ಪನ್ನಗಳ ಖರೀದಿ ಕೇಂದ್ರಗಳ ವಿವರ– ಬಾಗಲಕೋಟೆ ತಾಲೂಕಿನ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ, ಖಜ್ಜಿಡೋಣಿ (9901106360), ಟಿ.ಎ.ಪಿ.ಸಿ.ಎಂ.ಎಸ್ ಬಾಗಲಕೋಟೆ (7353861868), ಪಿ.ಕೆ.ಪಿ.ಎಸ್ ಕಲಾದಗಿ (9739946651), ಬಾದಾಮಿ ತಾಲೂಕಿನ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ, ಕಗಲಗೊಂಬ (9611859963), ಕೆಂದೂರು (9480410494), ನಂದಿಕೇಶ್ವರ (7624951919), ಹೆಬ್ಬಳ್ಳಿ (9916270586), ಟಿ.ಎ.ಪಿ.ಸಿ.ಎಂ. ಎಸ್ ಬಾದಾಮಿ (9008116746), ಪಿ.ಕೆ.ಪಿ.ಎಸ್ ಕೆರೂರ (9972301729), ಮುಧೋಳ ತಾಲೂಕಿನ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ, ಜುನ್ನೂರ (7022544942), ಸೊನ್ನ (9632289239), ಟಿ.ಎ.ಪಿ.ಸಿ.ಎಂ. ಎಸ್ ಬೀಳಗಿ (7019682890), ಹುನಗುಂದ (9480262655), ಜಮಖಂಡಿ (9448223654), ನಂದವಾಡಗಿ (9902377067), ಕರಡಿ (9110402689).

ಹೆಸರುಕಾಳು, ಉದ್ದಿನಕಾಳು ಹಾಗೂ ಸೋಯಾಬಿನ್ ಉತ್ಪನ್ನಗಳ ಖರೀದಿ ಕೇಂದ್ರಗಳಾದ ಟಿ.ಎ.ಪಿ.ಸಿಎಂ. ಎಸ್ ಬಾಗಲಕೋಟೆ (7353861868), ಪಿ.ಕೆ.ಪಿ.ಎಸ್ ಹಳ್ಳೂರ (9901325201), ಬೆನಕಟ್ಟಿ (9740406918), ಟಿ.ಎ.ಪಿ.ಸಿಎಂ. ಎಸ್ ಬಾದಾಮಿ (9008116746), ಪಿ.ಕೆ.ಪಿ.ಎಸ್ ಬಾದಾಮಿ (9611358837), ಕೆರೂರು (9972301729), ಎಫ್‌ಪಿಓ ಲೋಕಾಪೂರ (9880927310), ಸರ್ವಬಂಧು (9844474344), ಪಿಎಫ್‌ಪಿಸಿಎಲ್ ಇಳಕಲ್ಲ (8660203311), ಟಿ.ಎ.ಪಿ.ಸಿಎಂ.ಎಸ್ ಹುನಗುಂದ (9480262655), ಎಫ್‌ಪಿಓ ಸುಳೇಭಾವಿ (9449762433), ಪಿ.ಕೆ.ಪಿಎಸ್ ಮೂಗನೂರು (9310324070), ನಂದವಾಡಗಿ (9902377067), ಟಿ.ಎ.ಪಿ.ಸಿಎಂ.ಎಸ್ ಜಮಖಂಡಿ (7019445935), ಎಫ್‌ಪಿಓ ತೊದಲಬಾಗಿ (9741998771), ಟಿ.ಎ.ಪಿ.ಸಿಎಂ.ಎಸ್ ಬೀಳಗಿ (7019682890).

# ಉತ್ಸವಗಳು ಸಂಸ್ಕೃತಿಯ ಪ್ರತೀಕ–ಪ್ರಾ.ನರಗುಂದ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.30–ನಮ್ಮ ಸಂಸ್ಕೃತಿ ಹಾಗೂ ಪರಂಪರೆಯ ಪ್ರತೀಕವಾಗಿರುವ ಉತ್ಸವಗಳ ಮಹತ್ವ ಮತ್ತು ಸಾರವನ್ನು ಅರಿತು ಅವುಗಳನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನವರಾತ್ರಿ ಅಂಗವಾಗಿ ಮಂಗಳವಾರ ಹಮ್ಮಿಕೊಂಡ ಸರಸ್ವತಿ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನವರಾತ್ರಿಯಲ್ಲಿ ಶಕ್ತಿ ದೇವತೆಯ ವಿವಿಧ ರೂಪಗಳ ಪೂಜೆಯನ್ನು ಮಾಡಲಾಗುತ್ತದೆ. ವಿದ್ಯಾರ್ಥಿಗಳು ನಮ್ಮ ದೇಶದ ಸಂಸ್ಕೃತಿ–ಪರಂಪರೆಯನ್ನು ತಿಳಿದುಕೊಳ್ಳಬೇಕು. ಇಲ್ಲಿನ ಹಲವು ಉತ್ಸವಗಳು ನಮ್ಮ ಗತವೈಭವ, ಪರಂಪರೆಯನ್ನು ನೆನೆಪಿಸಿದರೆ, ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಿಗೆ ಸಂಸ್ಕಾರವನ್ನು ಕೊಡುವಲ್ಲಿ ಶಿಕ್ಷಣ ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂದರು. ಉಪನ್ಯಾಸಕರಾದ ಕೀರ್ತಿ ದಾಸರ, ಶ್ವೇತಾ ಕುಲಕರ್ಣಿ, ಜಂಟೀ ಕಾರ್ಯದರ್ಶಿ ಎಸ್.ಬಿ.ಪರ್ವತೀಕರ, ವಿದ್ಯಾರ್ಥಿಗಳಾದ ರಕ್ಷಿತಾ ಮಸೂತಿ ಮತ್ತು ಸ್ನೇಹಾ ಅರಬಿ ಭಕ್ತಿಗೀತೆಗಳನ್ನು ಸಾದರಪಡಿಸಿದರು. ಎಸ್.ಎಂಜೇವೂರ ವಂದಿಸಿದರು.

# ಅಶೋಕ ಬಿಜ್ಜಳಗೆ ಔಷಧ ತಜ್ಞ ಪುರಸ್ಕಾರ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.30–ವಿಶ್ವ ಔಷಧ ತಜ್ಞರ ದಿನಾಚರಣೆ ಅಂಗವಾಗಿ ಆಹಾರ ಸುರಕ್ಷತೆ ಮತ್ತು ಔಷದ ಆಡಳಿತ ಇಲಾಖೆಯಿಂದ ಕೊಡಮಾಡುವ ರಾಜ್ಯ ಮಟ್ಟದ ಉತ್ತಮ ಔಷಧ ತಜ್ಞ ಪುರಸ್ಕಾರಕ್ಕೆ ಇಲಕಲ್ಲಿನ ಅಶೋಕ ಬಿಜ್ಜಳ ಭಾಜನರಾಗಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಹಾಂತೇಶ್ವರ ಜಿದ್ದಿ ಅವರು ಪ್ರಶಸ್ತಿಗೆ ಭಾಜನರಾದ ಅಶೋಕ ಬಿಜ್ಜಳ ಅವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಈ ಸಂಧರ್ಭದಲ್ಲಿ ಸಹಾಯಕ ಔಷಧ ನಿಯಂತ್ರಕರಾದ ಶರಣಬಸಪ್ಪ ಹನಮನಾಳ, ಶ್ವೇತಾ ನಾರಾಯಣ, ಔಷಧಿ ಪರಿವೀಕ್ಷಕ ಅರುಣ ಕಟಾರಿ, ಆಹಾರ ಸುರಕ್ಷತಾ ಇಲಾಖೆಯ ರಾಜಶೇಖರ ಸಾಲಗುಂದಿ ಸೇರಿದಂತೆ ಜಿಲ್ಲಾ ಔಷಧಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ದೀಕ್ಷಾಭೂಮಿ ಯಾತ್ರೆಗೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.30–ವಿಜಯ ದಶಮಿಯ ದಿನ ನಾಗಪೂರದಲ್ಲಿ ನಡೆಯಲಿರುವ ಪ್ರವರ್ತನಾ ದಿನದ ದೀಕ್ಷಾಭೂಮಿ ಯಾತ್ರೆಗೆ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಮಂಗಳವಾರ ಚಾಲನೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪ ನಮನ ಅರ್ಪಿಸುವ ಮೂಲಕ ದೀಕ್ಷಾ ಭೂಮಿ ಯಾತ್ರೆಗೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಬಂತೇ–ಜಿ, ಜಿ.ಪಂ ಉಪ ಕಾರ್ಯದರ್ಶಿ ಎನ್. ವಾಯ್.ಬಸರಿಗಿಡದ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ, ಜಿ.ಪಂ ಸಹಾಯಕ ಯೋಜನಾ ನಿರ್ದೇಶಕ ಭೀಮಪ್ಪ ತಳವಾರ ಸೇರಿದಂತೆ ಸಮುದಾಯದ ಮುಖಂಡರಾದ ಪರಶುರಾಮ ನೀಲನಾಯಕ, ಮುತ್ತಣ್ಣ ಭಗವತಿ ಹಾಗೂ ಇತರರು ಉಪಸ್ಥಿತರಿದ್ದರು.

# ವಿವಿಧ ಕ್ರೀಡಾಂಗಣ ಕಾಮಗಾರಿಗಳ ಪರಿಶೀಲನೆ



**ಮಲ್ಲಮ್ಮ ನುಡಿ ವಾರ್ತೆ**

ರಾಯಚೂರು ಸೆಪ್ಟೆಂಬರ್ 30 – ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನರ್ದೇಶಕರಾದ ವಿರೇಶ ನಾಯಕ ಅವರು ಸೆಪ್ಟೆಂಬರ್ 30ರ ಮಂಗಳವಾರ ದಂದು ಗ್ರಾಮೀಣ ಪ್ರದೇಶದಲ್ಲಿ ಪ್ರವಾಸ ಕೈಗೊಂಡು ಇಲಾಖೆಯ ಕ್ರೀಡಾಂಗಣ ಕಾಮಗಾರಿಗಳನ್ನು ಪರಿಶೀಲನೆ ಮಾಡಿದರು.

ಮೊದಲು ಜಿಲ್ಲೆಯ ಸಿರವಾರ ಪಟ್ಟಣದ ಹೊರ ವಲಯದಲ್ಲಿ ಸುಮಾರು 8 ಎಕರೆ ವಿಸ್ತರ್ಣದ ನರ್ಮಾಣವಾಗುತ್ತಿರುವ ತಾಲೂಕು ಕ್ರೀಡಾಂಗಣ ಸ್ಥಳಕ್ಕೆ ಭೇಟಿ ಪರಿಶೀಲಿಸಿ, ಕಾಮಗಾರಿಯು ಗುಣಮಟ್ಟದ ದಿಂದ ಹಾಗೂ ನಿಗದಿತ ಸಮಯದಲ್ಲಿ ಪರ್ಣಗೊಳಿಸುವಂತೆ ಪಿಡಬ್ಲ್ಯೂಡಿ ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಕವಿತಾಳ ಪಟ್ಟಣದಲ್ಲಿ ನೂತನವಾಗಿ ನರ್ಮಾಣವಾಗುತ್ತಿರುವ ಕಾಮಗಾರಿಯಯ ಪರಿಶೀಲಿಸಿ ಗ್ರಾಮೀಣ ಕ್ರೀಡಾಪಟುಗಳಿಗೆ ಬೇಕಾಗುವ ಎಲ್ಲಾ ರೀತಿಯ ಕ್ರೀಡಾಂಗಣವನ್ನು ನರ್ಮಿಸಿ ಅನುಕೂಲ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಇದೇ ಸಂರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಸಹಾಯಕ ಅಭಿಯಂತರರಾದ ಸಂಭವು ಸೇರಿದಂತೆ ಇತರರು ಇದ್ದರು.

# ಜಿಲ್ಲಾ ನೂತನ ದೃಶ್ಯ ಮಾಧ್ಯಮ ಸಂಘ ರಚನೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ನೂತನ ಜಿಲ್ಲಾ ದೃಶ್ಯ ಮಾಧ್ಯಮ (ಎಲೆಕ್ಟ್ರಾನಿಕ್ ಮೀಡಿಯಾ) ಸಂಘ ರಚನೆಯಾಗಿದ್ದು, ಜಿಲ್ಲಾ ಮಟ್ಟದ ಪದಾಧಿಕಾರಿಗಳನ್ನು, ದೃಶ್ಯ ಮಾಧ್ಯಮದ ಸರ್ವ ಸದಸ್ಯರು ಸರ್ವಾನುಮತದಿಂದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ನಗರದ ಪ್ರವಾಸಿ ಮಂದಿರದಲ್ಲಿ ಸಭೆ ಮಾಡಿದ ದೃಶ್ಯ ಮಾಧ್ಯಮದ ವರದಿಗಾರರು ಹಾಗೂ ಕ್ಯಾಮೆರಾಮಾನ್ ಗಳು ನೂತನ ಜಿಲ್ಲಾ ದೃಶ್ಯ ಮಾಧ್ಯಮ ಸಂಘವನ್ನು ರಚನೆ ಮಾಡಿದರು. ನಂತರ ಸಂಘದ ಎಲ್ಲಾ ಸದಸ್ಯರು ಸರ್ವಾನುಮತದಿಂದ ಸಂಘದ ಜಿಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಿದರು. ಸಂಘದ ನೂತನ ಹಾಗೂ ಪ್ರಥಮ ಜಿಲ್ಲಾಧ್ಯಕ್ಷರಾಗಿ ಮುಕ್ಕಣ್ಣ ಕತ್ತಿ..

ಉಪಾಧ್ಯಕ್ಷರಾಗಿ ಉಮೇಶ್ ಅಬ್ಬಿಗೇರಿ, ಪ್ರಧಾನ ಕಾರ್ಯದರ್ಶಿಯಾಗಿ ರಾಜು ಬಿ.ಆರ್., ಖಜಾಂಚಿಯಾಗಿ ಜಗದೀಶ್ ಚಿಟ್ಟಿ ಹಾಗೂ ಕಾರ್ಯದರ್ಶಿಯಾಗಿ ಸಿದ್ದು ಹಿರೇಮಠ, ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಶಿವಕುಮಾರ್ ಪತ್ತಾರ್, ದೊಡ್ಡೇಶ್ ಯಲಿಗಾರ, ಶುಕ್ರರಾಜ್, ಈರಯ್ಯ ಹಿರೇಮಠ, ನಾಗಾರಜ್ ವೈ, ಬಸವರಾಜ್, ಮಲ್ಲು ಪರೂತಿ, ಧರ್ಮಣ್ಣ ಹಟ್ಟಿ, ಮಾರುತಿ ಕಟ್ಟಿಮನಿ, ವಿನಾಯಕ, ಸಮೀರ್ ಆಯ್ಕೆಯಾಗಿದ್ದಾರೆ.

ಹಿರಿಯವರದಿಗಾರ ಶರಣಪ್ಪ ಬಾಚಲಾಪುರ, ಕ್ಯಾಮೆರಾಮಾನ್ ಆಂಜಿನಯ್ಯ, ಕ್ಯಾಮೆರಾಮಾನ್ ಕುಂದಗೋಳ ಸಂಘದ ಸದಸ್ಯರಾಗಿದ್ದು, ಸರ್ವಾನುಮತದಿಂದ ಎಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

# ಶಾಸಕರಿಂದ ನೂತನ ಪ್ರೌಢಶಾಲೆಗೆ ಚಾಲನೆ




**ಮಲ್ಲಮ್ಮ ನುಡಿ ವಾರ್ತೆ**

ಕುಕನೂರ : ತಾಲೂಕಿನ ನೆಲಜೇರಿ ಗ್ರಾಮದಲ್ಲಿ ನೂತನ ಪ್ರೌಢ ಶಾಲೆಯನ್ನು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಶಾಸಕರಾದ ಬಸವರಾಜ ರಾಯರೆಡ್ಡಿ ಉದ್ಘಾಟಿಸಲಾಯಿತು.

ನಂತರ ಶಾಸಕ ಬಸವರಾಜ ರಾಯರೆಡ್ಡಿ ಮಾತನಾಡಿ ನನ್ನ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಬಹಳಷ್ಟು ಆದ್ಯತೆ ನೀಡಲಾಗಿದೆ. ಐಎಉಯಿಂದ ಕಉ ವರೆಗೆ ಶಿಕ್ಷಣ ಕ್ಷೇತ್ರಕ್ಕೆ ಒತ್ತು ಕೊಟ್ಟಿದ್ದು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಶ್ರಮಿಸಬೇಕು, ರಾಜ್ಯದಲ್ಲಿ ಅತಿ ಹೆಚ್ಚಿನ ಶಾಲಾ–ಕಾಲೇಜು, ವಸತಿ ಶಾಲೆಗಳನ್ನು ಸ್ಥಾಪಿಸಿ, ಬಡವರ ಮಕ್ಕಳು ಶೈಕ್ಷಣಿಕ ಪ್ರಗತಿಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಇಲ್ಲಿಯ ತನಕ 19 ನೂತನ ಪ್ರೌಢಶಾಲೆಗಳಿಗೆ ಚಾಲನೆ ನೀಡಲಾಗಿದ್ದು ಕ್ಷೇತ್ರದ ಅಭಿವೃದ್ಧಿಗಾಗಿ ಸದಾ ದುಡಿಯುವುದಾಗಿ ತಿಳಿಸಿದಲ್ಲದೆ ತಾಲೂಕಿನ ಮುಖ್ಯ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ಗುಣಮಟ್ಟದಿಂದ ನಿರ್ಮಿಸಲು ಸೂಚಿಸಲಾಗಿದ್ದು ಇನ್ನೂ ಗ್ರಾಮೀಣ ಪ್ರದೇಶದ ಎಲ್ಲಾ ರಸ್ತೆಗಳನ್ನು ಸುಧಾರಣೆ ಮಾಡಲಾಗುವುದು ಜೊತೆಗೆ ಬಡವರ ಕಲ್ಯಾಣ ಕಾರ್ಯಕ್ಕಾಗಿ ತಾಲೂಕಿನ ಹಲವೆಡೆ, ಬುದ್ಧ ಬಸವ ಅಂಬೇಡ್ಕರ ಭವನಗಳನ್ನು ನಿರ್ಮಿಸಿ ಮದುವೆ ಹಾಗೂ ಇನ್ನಿತರ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಡುವ ಉದ್ದೇಶವನ್ನು ಹೊಂದಲಾಗಿದ್ದು ಈಗಾಗಲೇ ಹಲವಾರು ಕಡೆಗಳಲ್ಲಿ ಭವನದ ಕಟ್ಟಡ ನಿರ್ಮಾಣ ಹಂತದಲ್ಲಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷರಾದ ಮಂಜುನಾಥ್ ಚನ್ನದಾಸರ ಹಾಗೂ ಸರ್ವ ಸದಸ್ಯರು, ತಹಶಿಲ್ದಾರರಾದ ಪ್ರಾಣೇಶ್ ಎಚ್, ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್ ಪಾಟೀಲ್ ಬಿರಾದಾರ್ , ಉಪ ನಿರ್ದೇಶಕರು ಶಿಕ್ಷಣ ಮತ್ತು ಸಾಕ್ಷರ ಇಲಾಖೆಯ ಅಧಿಕಾರಿಗಳಾದ ಸೋಮಶೇಖರಗೌಡ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಗೌಡರ, ಶಿವನಗೌಡ ದಾನರೆಡ್ಡಿ, ಕರಿಬಸಪ್ಪ ನಿಡಗುಂದಿ, ಶರಣಪ್ಪ ಗಾಂಜಿ, ಲೋಕೋಪಯೋಗಿ ಇಲಾಖೆ ಮಲ್ಲಿಕಾರ್ಜುನ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧಿಕಾರಿ ಅನಿಲ್ ಪಾಟೀಲ್, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪರಶುರಾಮ ನಾಯಕ, ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಮುಖಂಡರು, ಗ್ರಾಮಸ್ಥರು ಇದ್ದರು.

# ರೇಬಿಸ್ ರೋಗದ ಕುರಿತು ಜಾಗೃತಿ ಮೂಡಿಸಿ




**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.30–ವಿಶ್ವರೇಬಿಸ್ ದಿನಾಚರಣೆ ಅಂಗವಾಗಿ ನಗರದ ಜಿಲ್ಲಾ ಪಶು ಆಸ್ಪತ್ರೆಯಲ್ಲಿ ಹುಚ್ಚು ನಾಯಿ ರೋಗ ವಿರುದ್ದ ಹಮ್ಮಿಕೊಂಡ ಲಸಿಕಾ ಅಭಿಯಾನಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿ.ಪಂ ಸಿಇಓ ಶಶಿಧರ ಕುರೇರ ಸೋಮವಾರ ಚಾಲನೆ ನೀಡಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡ ರೇಬಿಸ್ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿ ಸಂಗಪ್ಪ, ರೇಬಿಸ್ ರೋಗವು ಮಾರಣಾಂತಿಕ ರೋಗವಾಗಿದ್ದು ಹುಚ್ಚು ಪ್ರಾಣಿಗಳ ಕಡಿತದಿಂದ ಲಿಸ್ಸಾ ಎಂಬ ವೈರಾಣುವಿನಿಂದ ಹರಡುವ ಮಾರಣಾಂತಿಕ ರೋಗವಾಗಿದ್ದು ಒಮ್ಮೆ ರೋಗ ಬಂದರೆ ಸಾವು ಖಚಿತ, ಆದ್ದರಿಂದ ರೋಗ ತಡೆಗಟ್ಟುವುದು ಮೂಲ ಉದ್ದೇಶ ಆದ್ದರಿಂದ ಎಲ್ಲ ಸಾಕು ನಾಯಿಗಳಿಗೆ ರೇಬಿಸ ವಿರುದ್ದ ಲಸಿಕೆ ಹಾಕಬೇಕೆಂದು ಹಾಗೂ ಸಾರ್ವಜನಿಕರಲ್ಲಿ ರೋಗದ ಕುರಿತು ಜಾಗ್ರತೆ ಮೂಡಿಸಲು ಕರೆ ನೀಡಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಸಾಕು ನಾಯಿ ಮಾಲಿಕರು ನಾಯಿ ಮತ್ತು ಬೆಕ್ಕು ಮರಿಗಳಿಗೆ ಮುಂಜಾಗ್ರತೆಗಾಗಿ 3 ತಿಂಗಳೊಳಗಾಗಿ ಪ್ರಥಮ ಲಸಿಕೆ, ಒಂದು ತಿಂಗಳ ನಂತರ ಬೂಸ್ಟರ್ ಲಸಿಕೆ ಹಾಕಿಸಿ ಪ್ರತಿ ವರ್ಷ ನಿಗದಿತ ದಿನದಂದು ತಪ್ಪದೇ ರೇಬಿಸ್ ಲಸಿಕೆಯನ್ನು ಹಾಕಿಸಬೇಕು. ಈ ಬಗ್ಗೆ ದೃಡೀಕರಣ ಪುಸ್ತಕ ನಿರ್ವಹಣೆಯಾಗಬೇಕು. ಯಾವುದೇ ಮಾಟ, ಮಂತ್ರ ಮತ್ತು ಮೂಡನಂಬಿಕೆಗಳಿಗೆ ಮಾರು ಹೋಗಬಾರದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಲಸಿಕಾ ಅಭಿಯಾನದ ಪ್ರಚಾರದ ಕರಪತ್ರಗಳನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಪಶು ಇಲಾಖೆಯ ಉಪನಿರ್ದೇಶಕ ಎಸ್.ಎಚ್.ಕರಡಿಗುಡ್ಡ, ಪಶು ಜಿಲ್ಲಾ ಆಸ್ಪತ್ರೆಯ ಉಪನಿರ್ದೇಶಕ ಶಿವಕುಮಾರ ಹೊಳೆಪ್ಪಗೋಳ, ಮುಖ್ಯ ಪಶು ವೈದ್ಯಾಧಿಕಾರಿ ಡಾ.ಆರ್. ಎಸ್.ಪದರಾ, ವೈದ್ಯಾಧಿಕಾರಿಗಳಾದ ಡಾ.ಪ್ರಶಾಂತ ಸವದಿ, ಡಾ.ಪಚ್ಚನ್ನವರ, ಡಾ.ಎಸ್.ಎಚ್.ಗುಡದಿನ್ನಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಲಸಿಕಾ ಅಭಿಯಾನದಲ್ಲಿ 60 ನಾಯಿಗಳಿಗೆ ಹುಚ್ಚು ನಾಯಿ ರೋಗ ನಿರೋಧಕ ಲಸಿಕೆಯನ್ನು ಹಾಕಲಾಯಿತು. ಈ ಅಭಿಯಾನ ಅಕ್ಟೋಬರ 28ವರೆಗೆ ನಡೆಯಲಿದ್ದು, ಜಿಲ್ಲೆಯ ಎಲ್ಲ ಪಶು ವೈದ್ಯ ಸಂಸ್ಥೆಗಳಲ್ಲಿ ಲಸಿಕೆ

# ಆರೋಗ್ಯ ಸಂಜೀವಿನಿ ಯೋಜನೆ ಜಾರಿ:ಅಭಿನಂದನೆ

**ಮಲ್ಲಮ್ಮ ನುಡಿ ವಾರ್ತೆ**

ತಾಳಿಕೋಟಿ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸಿರುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಅಕ್ಟೋಬರ್ 1ರಿಂದ ಜಾರಿಗೊಳಿಸಲು ಸರ್ಕಾರ ಆದೇಶ ಹೊರಡಿಸಿದ್ದು, ಸರ್ಕಾರಿ ನೌಕರರಿಗೆ ಹರ್ಷ ತಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಉಪಮುಖ್ಯಮಂತ್ರಿಗಳಾದ ಡಿ.ಕೆ .ಶಿವಕುಮಾರ ಹಾಗೂ ಕರ್ನಾಟಕ



ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರು, ಮುದ್ದೇಬಿಹಾಳ ಮತಕ್ಷೇತ್ರದ ಶಾಸಕರಾದ ಸಿ. ಎಸ್.ನಾಡಗೌಡ( ಅಪ್ಪಾಜಿ) ಅವರಿಗೂ ಕರ್ನಾಟಕ ರಾಜ್ಯ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಸಿ.ಎಸ್. ಷಡಕ್ಷರಿ, ರಾಜ್ಯ ಹಿರಿಯ ಉಪಾಧ್ಯಕ್ಷರಾದ ಸುರೇಶ ಶೇಡಶ್ಯಾಳ ಅವರಿಗೂ ಸರ್ಕಾರಿ ನೌಕರ ಸಂಘದ ತಾಳಿಕೋಟಿ ತಾಲೂಕು ಘಟಕದ ಅಧ್ಯಕ್ಷರಾದ ಶಿವರಾಜ್ ಚೌಧರಿ ಅವರು ಅಭಿನಂದಿಸಿದ್ದಾರೆ. ಪತ್ರಿಕಾ ಪ್ರಕಟಣೆಯಲ್ಲಿ ಅವರು ಈ ಮಹತ್ವಕಾಂಕ್ಷಿ ಯೋಜನೆ ಸರಕಾರದ ವಿವಿಧ ಇಲಾಖೆಗಳ 6 ಲಕ್ಷ ಸರ್ಕಾರಿ ನೌಕರರು ಮತ್ತು ಅವರ ಕುಟುಂಬ ಸದಸ್ಯರನ್ನು ಒಳಗೊಂಡಂತೆ ಅಂದಾಜು 25 ಲಕ್ಷ ಫಲಾನುಭವಿಗಳು ನಗದು ರಹಿತ ಆರೋಗ್ಯ ಸೌಲಭ್ಯವನ್ನು ಪಡೆದುಕೊಳ್ಳಲಿದ್ದಾರೆ. ಸರ್ಕಾರಿ ನೌಕರರಿಗೆ ದುಬಾರಿ ವೆಚ್ಚದ ಮಾರಣಾಂತಿಕ ಕಾಯಿಲೆಗಳು ಹಾಗೂ ಶಸ್ತ್ರಚಿಕಿತ್ಸೆ ಸೇರಿದಂತೆ ಬಹುತೇಕ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ ದೊರೆಯಲಿದೆ ಹೀಗಾಗಿ ನೌಕರರ ಆರೋಗ್ಯ ಹಿತ ಕಾಪಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹಾಗೂ ಯೋಜನೆ ಜಾರಿಗೆ ಸಹಕರಿಸಿದ ಕ್ಷೇತ್ರದ ಶಾಸಕರಾದ ಅಪ್ಪಾಜಿ ನಾಡಗೌಡರಿಗೆ ನೌಕರರ ಸಂಘದ ಪರವಾಗಿ ಅಭಿನಂದಿಸುತ್ತೇನೆ ಎಂದು ತಿಳಿಸಿದ್ದಾರೆ.

# ಅ.07 ರಂದು ಜಿಲ್ಲಾ ಕೇಂದ್ರದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.30–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸೀಗೆ ಹುಣ್ಣಿಮೆ ದಿನದಂದು ಅ.07 ರಂದು ಬೆಳಿಗ್ಗೆ 11 ಗಂಟೆಗೆ ನಗರದ ನಲ್ಲಚೇರುವು ಪ್ರದೇಶದ ವಾಲ್ಮೀಕಿ ಭವನದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 09 ಗಂಟೆಗೆ ವಾಲ್ಮೀಕಿ ಭವನದ ಆವರಣದಲ್ಲಿರುವ ಶ್ರೀ ವಾಲ್ಮೀಕಿ ಮಹರ್ಷಿಯವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುತ್ತದೆ.

ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು, ಜನಪ್ರತಿನಿಧಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ತಪ್ಪದೇ ಹಾಜರಾಗಬೇಕು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಮೈಸೂರು ದಸರಾ
ಕ್ರಿ.ಶ. 1610 ರಿಂದ ಆಚರಣೆ
ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಗಾಂಧಿ ಭಾರತ
ಲಾಲ್ ಬಹದ್ದೂರ್ ಶಾಸ್ತ್ರಿಯವರ
121ನೇ ಜನ್ಮ ದಿನಾಚರಣೆ
ದಸರಾ
ಅಂದರೆ
ಅಸತ್ಯದ ಮೇಲೆ
ಸತ್ಯದ
ಜಯ
ವಿಶ್ವ ವಿಖ್ಯಾತ
ಮೈಸೂರು ದಸರಾ
ನಾಡ ಹಬ್ಬ - 2025
ರಾಷ್ಟ್ರಪಿತ
ಮಹಾತ್ಮ ಗಾಂಧೀಜಿ
ಅವರ 156ನೇ ಜನ್ಮ ದಿನಾಚರಣೆ
2ನೇ ಅಕ್ಟೋಬರ್ 2025
ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ
156ನೇ ಜನ್ಮದಿನದ ಅಂಗವಾಗಿ
ಅವರ ಪ್ರತಿಮೆಗೆ ಗೌರವ ಸಮರ್ಪಣೆ
ದಿನಾಂಕ: 02-10-2025, ಗುರುವಾರ
ಬೆಳಿಗ್ಗೆ 8:30 ಕ್ಕೆ | ಗಾಂಧಿ ಚೌಕ, ಮೈಸೂರು
ನಂದಿಧ್ವಜ ಪೂಜೆ
(ಬಲರಾಮ ದ್ವಾರ, ಅರಮನೆ ಆವರಣ)
ದಿನಾಂಕ: 02-10-2025, ಗುರುವಾರ
ಮಧ್ಯಾಹ್ನ 1:00 ರಿಂದ 1:18 ರವರೆಗೆ
ಸಲ್ಲುವ ಶುಭ ಧನುರ್ ಲಗ್ನದಲ್ಲಿ
ವಿಜಯದಶಮಿ ಮೆರವಣಿಗೆ
(ಅರಮನೆ ಒಳಾಂಗಣ)
ದಿನಾಂಕ: 02-10-2025, ಗುರುವಾರ
ಸಂಜೆ: 4:42 ರಿಂದ 5:06 ರವರೆಗೆ
ಸಲ್ಲುವ ಶುಭ ಕುಂಭ ಲಗ್ನದಲ್ಲಿ
ಪಂಜಿನ ಕವಾಯತು
(ಟಾರ್ಚ್ ಲೈಟ್ ಪೆರೇಡ್)
ದಿನಾಂಕ: 02-10-2025, ಗುರುವಾರ | ಸಮಯ: ಸಂಜೆ 7:00 ಗಂಟೆಗೆ
ಸ್ಥಳ: ಬನ್ನಿ ಮಂಟಪ ಮೈದಾನ
ನಾಡಹಬ್ಬ ದಸರಾದ
ಶುಭಾಶಯಗಳು
ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ
ಶಕ್ತಿ
ಮಹಿಳೆಯರಿಗೆ
ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ
10 kg ಅಕ್ಕಿ
ಗೃಹಜ್ಯೋತಿ
ಪ್ರತಿ ಮನೆಗೆ
200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 | ₹1500
ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ